# ಅಧ್ಯಾಯ ೪

## ಚಿಕ್ಕಮಗಳೂರು ಜಿಲ್ಲೆ

**ಭೂಗೋಳ :**

ಮಲೆನಾಡು ಮತ್ತು ಮೈದಾನ ಪ್ರದೇಶದಿಂದ ಕೂಡಿರುವ ಚಿಕ್ಕಮಗಳೂರು ಜಿಲ್ಲೆ ಕರ್ನಾಟಕದ ಇತರ ಜಿಲ್ಲೆಗಳಲ್ಲೇ ವಿಶಿಷ್ಟವಾದದು. ಬೆಟ್ಟಗುಡ್ಡಗಳಿಂದಲೂ, ದಟ್ಟ ಕಾಡುಗಳಿಂದಲೂ ಕಂಗೊಳಿಸುವ ಈ ಜಿಲ್ಲೆ ಭೌಗೋಳಿಕವಾಗಿ ವೈವಿಧ್ಯಪೂರ್ಣವೆನಿಸಿದೆ. ಇದರ ಭೌಗೋಳಿಕ ವಿಸ್ತೀರ್ಣ 7199 ಚ.ಮೀ.ಗಳು. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಅತ್ಯಂತ ಎತ್ತರವಾದ ಪಶ್ಚಿಮ ಘಟ್ಟಗಳು ಹಬ್ಬಿದ್ದು, ದಕ್ಷಿಣಕನ್ನಡ ಜಿಲ್ಲೆಗೂ ಈ ಜಿಲ್ಲೆಗೂ ಮಧ್ಯೆಗೋಡೆಯನ್ನು ನಿರ್ಮಿಸಿದಂತಿವೆ. ಜಿಲ್ಲೆಯ ಮಧ್ಯಭಾಗದಲ್ಲಿ ಹಾದು ಹೋಗುವ ಬಾಬಾಬುಡನ್‌ಗಿರಿ ಪರ್ವತ ಶ್ರೇಣಿ, ಮಲೆನಾಡು ಮತ್ತು ಮೈದಾನ ಪ್ರದೇಶಗಳನ್ನು ಬೇರ್ಪಡಿಸಿಸುವ ಗೋಡೆಯಂತಿದೆ. ಪಶ್ಚಿಮ ಘಟ್ಟದ ಅತಿ ಎತ್ತರದ ಶಿಖರ ಕುದುರೆಮುಖ ಸಮುದ್ರ ಮಟ್ಟದಿಂದ 6215 ಅಡಿಗಳ ಎತ್ತರದಲ್ಲಿದೆ. ಬಲ್ಲಾಳುರಾಯನ ದುರ್ಗ (4940 ಅಡಿ) ಮೆರ್ತಿಗುಡ್ಡ (5451 ಅಡಿ) ಮತ್ತು ವರಾಹಪರ್ವತವೆಂದು ಖ್ಯಾತವಾಗಿರುವ ಗಂಗಾ ಮೂಲ ಶಿಖರ 4781 ಅಡಿಗಳ ಎತ್ತರದಲ್ಲಿದೆ. ಮುಳ್ಳಯ್ಯನಗಿರಿ (6317 ಅಡಿ), ಬಾಬಾಬುಡನ್ ಗಿರಿ (6214 ಅಡಿ), ಕಲ್ಲತ್ತಿಗಿರಿ (6155 ಅಡಿ) ಮುಖ್ಯವಾದ ಪರ್ವತ ಶ್ರೇಣಿಗಳು.)




ಈ ಜಿಲ್ಲೆಯಲ್ಲಿ ಮುಖ್ಯವಾಗಿ ತುಂಗಾ, ಭದ್ರಾ, ಹೇಮಾವತಿ, ವೇದಾವತಿ, ಯಗಚಿ ಮುಂತಾದ ನದಿಗಳು ಹರಿಯುತ್ತವೆ. ಅಲ್ಲದೆ ಅನೇಕ ಸಣ್ಣಪುಟ್ಟ ಝರಿಗಳೂ ಈ ಜಿಲ್ಲೆಯಲ್ಲಿ ಹರಿಯುತ್ತವೆ. ಕಡೂರು ತಾಲೂಕಿನಲ್ಲಿರುವ ಐಯ್ಯನಕೆರೆ ಮತ್ತು ಮದಗದ ಕೆರೆಗಳು ಇತಿಹಾಸ ಪ್ರಸಿದ್ಧವಾಗಿದ್ದು ಸಾವಿರಾರು ಎಕರೆ ಜಮೀನಿಗೆ

ನೀರಾವರಿ ಸೌಕರ್ಯವನ್ನು ಒದಗಿಸುತ್ತದೆ. ಜಿಲ್ಲೆಯಲ್ಲಿನ ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಶೃಂಗೇರಿ ಮತ್ತು ಮೂಡಿಗೆರೆ ತಾಲೂಕಿನಲ್ಲಿ ಹೆಚ್ಚಿನ ಮಳೆಯಾಗುತ್ತದೆ. ಜಿಲ್ಲೆಯ ಮೈದಾನ ಪ್ರದೇಶವಾದ ಕಡೂರು ತಾಲೂಕಿನಲ್ಲಿ ಅತಿ ಕಡಿಮೆ ಮಳೆಯಾಗುತ್ತದೆ. ಇಲ್ಲಿ ಕಬ್ಬಿಣ, ಮ್ಯಾಂಗನೀಸ್, ಅಬ್ರಕ, ತಾಮ್ರ, ಗ್ರಾಫೈಟ್, ಸುಣ್ಣಕಲ್ಲು ಮುಂತಾದ ಖನಿಜಗಳು ಸಿಕ್ಕುತ್ತವೆ. ಕುದುರೆಮುಖ ಕಬ್ಬಿಣದ ನಿಕ್ಷೇಪ ರಾಷ್ಟ್ರದಲ್ಲೇ ಹೆಸರುವಾಸಿಯಾಗಿದೆ. ನಿತ್ಯ ಹರಿದ್ವರ್ಣ ಕಾಡುಗಳಿವೆ. ಉತ್ತಮ ಜಾತಿಯ ತೇಗ, ನಂದಿ. ಬೀಟೆ, ಹೊನ್ನೆ, ಶ್ರೀಗಂಧದ ಮರಗಳಿವೆ. ಬಿದಿರು ಬೆತ್ತಗಳೂ ಹೇರಳವಾಗಿವೆ. ಬಯಲು ಪ್ರದೇಶದಲ್ಲಿ ತೆಳುವಾದ ಕಾಡಿದೆ. ವನ್ಯಜೀವಿಗಳು ತುಂಬಾ ಇವೆ. ಭದ್ರ ಮತ್ತು ಮುತ್ತೋಡಿ ಅಭಯಾರಣ್ಯಗಳನ್ನು ವನ್ಯಮೃಗರಕ್ಷಣೆಗೆ ನಿರ್ಮಿಸಲಾಗಿದೆ. ಆನೆ, ಹುಲಿ, ಚಿರತೆ, ಕಾಡೆಮ್ಮೆ, ಜಿಂಕೆ, ತೋಳ, ನರಿ, ಕಾಡುಹಂದಿಗಳಿವೆ. ನವಿಲು ವಿವಿಧ ಬಗೆಯ ಪಕ್ಷಿಗಳಿವೆ.

ಮುಖ್ಯವಾಗಿ ಮಲೆನಾಡಿನ ಭಾಗದ ಗಿರಿಕಂದರಗಳಲ್ಲಿ ಕಾಫಿ, ಏಲಕ್ಕಿ, ಮೆಣಸು, ಟೀ ಮುಂತಾದ ಆರ್ಥಿಕ ಬೆಳೆಗಳಿವೆ. ಕಾಫಿ ತೋಟದ ಮಧ್ಯೆ ಮಧ್ಯೆ ತಗ್ಗು ಪ್ರದೇಶದಲ್ಲಿ ಭತ್ತ ಮುಖ್ಯ ಬೆಳೆಯಾಗಿದೆ. ಮೈದಾನ ಪ್ರದೇಶದಲ್ಲಿ ರಾಗಿ, ಭತ್ತ, ಜೋಳ, ಎಳ್ಳು, ನೆಲಗಡಲೆ, ತರಕಾರಿ ಬೆಳೆಯುತ್ತಾರೆ. ಕಡೂರು ಮತ್ತು ತರೀಕೆರೆ ತಾಲೂಕುಗಳಲ್ಲಿ ಅಡಿಕೆ, ತೆಂಗು, ವೀಳ್ಯದೆಲೆ ಬಾಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಹಿತಕರವಾದ ವಾತಾವರಣ, ಒಳ್ಳೆಯ ಹವಾಮಾನ ವರ್ಷವಿಡೀ ಇರುತ್ತದೆ.

**ಇತಿಹಾಸ :**

ಚಿಕ್ಕಮಗಳೂರು ಜಿಲ್ಲೆಯಲ್ಲಿ ದೊರೆತಿರುವ 900 ಶಾಸನಗಳಲ್ಲಿ 300 ಶಾಸನಗಳು ಹೊಯ್ಸಳರಿಗೆ ಸಂಬಂಧಿಸಿದವು. ಇವುಗಳಲ್ಲಿ ದಾನಶಾಸನಗಳು ಅಧಿಕವಾಗಿವೆ. ಎರಡನೆಯದು ವೀರಗಲ್ಲುಗಳು ಮತ್ತು ಮೂರನೆಯ ಸ್ಥಾನ ಮಾಸ್ತಿಕಲ್ಲುಗಳದ್ದು. ಅನಂತರ ನಿಸಿದಿಕಲ್ಲುಗಳು ಹಾಗೂ ಸ್ಮಾರಕಗಳಿವೆ. ಇವು ಇತಿಹಾಸದ ಮೇಲೂ ಬೆಳಕು ಚೆಲ್ಲುತ್ತವೆ. ಇಲ್ಲಿನ ಪ್ರಾಗಿತಿಹಾಸ ಗಮನೀಯವಾದುದು. ಕಡೂರಿನ ಸಮೀಪದ ನಿಡಘಟ್ಟ ಮತ್ತು ಲಿಂಗದಹಳ್ಳಿಗಳಲ್ಲಿ ಹಳೆಯ ಶಿಲಾಯುಗದ ಅವಶೇಷಗಳು ದೊರಕಿವೆ. ತರೀಕೆರೆ ತಾಲೂಕಿನ ಕಲ್‌ದುರ್ಗದಲ್ಲಿ ಕೈಗೊಡಲಿಗಳು, ಮತ್ತಿತರ ಕಲ್ಲಿನ ಉಪಕರಣಗಳು ಕಂಡುಬಂದಿವೆ. ಮೂಡಿಗೆರೆ ತಾಲೂಕಿನ ಹೇರಿಕೆಗೆ ಸಮೀಪದ ಪಾಂಡವರ ಗುಡ್ಡದಲ್ಲಿ ಅನೇಕ ಶಿಲಾ ಉಪಕರಣಗಳಿವೆ. ಅಲ್ಲದೆ ಇದೇ ತಾಲೂಕಿನ ಕೊಟ್ಟಿಗೆಹಾರದ ಹತ್ತಿರ ಪ್ರಾಚೀನ ಕಾಲದ ಕಬ್ಬಿಣ ಕರಗಿಸುವ ನಿವೇಶನ ಕಂಡುಬಂದಿದೆ. ಚಿಕ್ಕಮಗಳೂರು ಬಳಿಯ ಮತ್ತಾವರದಲ್ಲಿ ಹಾಗೂ ಕಡೂರು ತಾಲೂಕಿನ ಸಕ್ಕರೆ ಪಟ್ಟಣದಲ್ಲಿ ಶೃಂಗೇರಿ ಬಳಿಯಲ್ಲಿ ಬೃಹತ್ ಶಿಲಾಸಮಾಧಿಗಳು ದೊರೆತಿವೆ. ಈ ಸಾಕ್ಷ್ಯಾಧಾರಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತಿಹಾಸ ಪೂರ್ವದಲ್ಲೇ ಜನಜೀವನ ನಡೆದು ಬಂದಿತ್ತೆಂದು ಪುರಾವೆ ಒದಗಿಸುತ್ತವೆ.

ಅಶೋಕನ ಕಾಲಕ್ಕೂ ಮೊದಲೇ ಈ ಪ್ರದೇಶದಲ್ಲಿ ನಾಗರಿಕತೆ ಮತ್ತು ರಾಜ್ಯ ವ್ಯವಸ್ಥೆ ಬೆಳೆದು ಬಂದಿತ್ತು ಎಂಬುದಕ್ಕೆ ಅಶೋಕನ ಶಾಸನಗಳು ಐತಿಹಾಸಿಕ ದಾಖಲೆಗಳಾಗಿವೆ. ಮೌರ್ಯರ ತರುವಾಯ ಸಾತವಾಹನರು ದಖನ್ ಪ್ರದೇಶದಲ್ಲಿ ಸಾಮ್ರಾಜ್ಯವನ್ನು ಕಟ್ಟಿದರು. ಅವರ ಶಾಸನಗಳು ಬನವಾಸಿಯಲ್ಲಿ ದೊರೆತಿವೆ. ಈ ಪ್ರದೇಶವೂ ಅವರ ಪ್ರಭಾವ ವಲಯದಲ್ಲಿತ್ತೆಂಬುದಕ್ಕೆ ಇದು ಪ್ರಮುಖ ಸಾಕ್ಷಿಯಾಗಿದೆ. ದಕ್ಷಿಣದ ತಮಿಳುನಾಡನ್ನು ಆಳುತ್ತಿದ್ದ ಪಲ್ಲವರು ಸಾತವಾಹನರ ಪತನವಾದ ಮೇಲೆ ಉತ್ತರ ಮತ್ತು ಪಶ್ಚಿಮಕ್ಕೆ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಸಕ್ಕರೆಪಟ್ಟಣದಲ್ಲಿ ದೊರೆತ ಪಲ್ಲವ ಸಿಂಹವರ್ಮನ ತಾಮ್ರ ಶಾಸನದಿಂದ ಅವರ ರಾಜ್ಯ ಇಲ್ಲಿಂದಾಚೆಗೂ ವಿಸ್ತರಿಸಿತ್ತೆಂದು ಹೇಳಬಹುದು. ನಾಲ್ಕನೆಯ ಶತಮಾನದ ಆರಂಭದಲ್ಲಿ ಕದಂಬ ಮಯೂರವರ್ಮನು ಪಲ್ಲವರನ್ನು ಸೋಲಿಸಿ ಬನವಾಸಿಯನ್ನು ರಾಜಧಾನಿಯನ್ನಾಗಿಸಿ ಕೊಂಡು, ದಕ್ಷಿಣದ ಕಾವೇರಿಯವರೆಗೂ ರಾಜ್ಯಭಾರ ಮಾಡಿದರು. ಅವರ ರಾಜ್ಯದ ಭಾಗವಾಗಿ ಚಿಕ್ಕಮಗಳೂರು ಜಿಲ್ಲೆ ಸೇರಿತ್ತು. ಕದಂಬ ಕಾಕುಸ್ಥವರ್ಮನ ಕಾಲದ ಐದನೆಯ ಶತಮಾನದ ಕನ್ನಡ ಶಾಸನ ನೆರೆಯ ಹಾಸನ ಜಿಲ್ಲೆಯ ಬೇಲೂರು ತಾಲೂಕಿನಲ್ಲಿ ದೊರೆತಿದೆ. ಮುಂದೆ ಈಗಿನ ಮೈಸೂರು ಜಿಲ್ಲೆಯ ತಲಕಾಡನ್ನು ಆಳುತ್ತಿದ್ದ ಗಂಗರು ಕದಂಬ ರಾಜ್ಯದ ಭಾಗಗಳನ್ನು ವಶಪಡಿಸಿಕೊಂಡರು. ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಪ್ರದೇಶಗಳಲ್ಲಿ. ಗಂಗ ಕದಂಬರಿಬ್ಬರೂ ಮೇಲುಗೈಯಾಗಿ ಸೆಣಸಿದರು.

**ಗಂಗರು :**

ದುರ್ವಿನೀತನ ಕಾಲಕ್ಕೆ ಗಂಗರು ಇಲ್ಲಿ ಸ್ಥಾಪಿತವಾದರು. ಕಡೂರು ತಾಲೂಕಿನ ಅಸಂದಿ ಗಂಗರ ಪ್ರಾಂತೀಯ ಕೇಂದ್ರವಾಗಿತ್ತು. ಹಾಗಾಗಿ ಚಿಕ್ಕಮಗಳೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ಗಂಗರ ಶಾಸನಗಳು ದೊರತಿವೆ. ಚಿಕ್ಕಮಗಳೂರು ನಗರ ಪ್ರದೇಶದೊಳಗಿರುವ ಕೋಟೆ ಪ್ರದೇಶ ಗಂಗರ ಪ್ರಮುಖ ನೆಲೆಯಾಗಿತ್ತು. ಅವರ ಕಾಲದಲ್ಲಿ ಹಿರೇಮಗಳೂರು ಅಗ್ರಹಾರವಾಗಿದ್ದು ಧಾರ್ಮಿಕ ಮಹತ್ವ ಪಡೆದಿತ್ತು. ಈ ಎರಡೂ ಕಡೆಗಳಲ್ಲಿ ದೊರೆತಿರುವ ಶಾಸನಗಳಲ್ಲಿ ಚಿಕ್ಕಮಗಳೂರನ್ನು 'ಕಿರಿಯಮುಗುಳಿ' ಎಂದೂ, ಹಿರೇಮಗಳೂರನ್ನು 'ಹಿರಿಯಮುಗುಳಿ' ಎಂದೂ ಕರೆಯಲಾಗಿದೆ. ಇದರಿಂದಾಗಿ ಸಕ್ಕರೆಪಟ್ಟಣದ ರಾಜ ರುಕ್ಮಾಂಗದನು ತನ್ನ ದೊಡ್ಡ ಮಗಳನ್ನು ಹಿರೇಮಗಳೂರಿಗೂ, ಚಿಕ್ಕಮಗಳನ್ನು ಚಿಕ್ಕಮಗಳೂರಿಗೂ ಕೊಟ್ಟು ವಿವಾಹ ಮಾಡಿದ್ದರಿಂದ ಇವುಗಳಿಗೆ ಈಗಿನ ಹೆಸರು ಬಂದಿತೆಂಬುದರಲ್ಲಿ ಆಧಾರವಿಲ್ಲ. ಅದು ಪ್ರಚಲಿತವಿರುವ ಒಂದು ಐತಿಹ್ಯವಷ್ಟೆ. ಮುಗುಳಿ ಎಂದರೆ ಒಂದು ಬಗೆಯ ಹೂವಿನ ಗಿಡವೆಂದು ಹೇಳಲಾಗಿದೆ. ಗಂಗರು ಹೊಯ್ಸಳರ ಕಾಲದಲ್ಲಿ ಅಸಂದಿಯಲ್ಲಿ ಮಹಾಮಾಂಡಲಿಕರಾಗಿ ಆಳುತ್ತಿದ್ದರು. ಗಂಗರ ಕಾಲದಲ್ಲಿ ಚಿಕ್ಕಮಗಳೂರು, ಹಿರೇಮಗಳೂರು, ಅಸಂದಿ, ಶೃಂಗೇರಿ, ದೇವವೃಂದ, ಬುಕ್ಕಾಂಬುದಿ, ಕಿಗ್ಗ ಮುಖ್ಯ ಸ್ಥಳಗಳಾಗಿದ್ದವು. ಸುಮಾರು ಹತ್ತನೆಯ ಶತಮಾನದವರೆಗೂ ಗಂಗರು ಸುದೀರ್ಘಕಾಲ

ಆಳ್ವಿಕೆ ನಡೆಸಿದ್ದರಿಂದ ಇಲ್ಲಿನ ಆಡಳಿತ, ಧರ್ಮ ಮತ್ತು ಸಂಸ್ಕೃತಿಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಇವರ ಕಾಲದಲ್ಲಿಯೇ ಶೃಂಗೇರಿಯಲ್ಲಿ ಆದಿಶಂಕರಾಚಾರ್ಯರು ಶ್ರೀ ಶಾರದಾಂಬ ಪೀಠವನ್ನು ಸ್ಥಾಪಿಸಿದರು (ಎಂಟನೆಯ ಶತಮಾನ).

ಅನಂತರ ಸಾಂತಾರರು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಹೊಂಬುಜದಲ್ಲಿ ರಾಜ್ಯ ಸ್ಥಾಪಿಸಿ, ಉತ್ತರ ಕನ್ನಡಜಿಲ್ಲೆಯಿಂದ ಹಾಸನದವರೆಗೂ ಹಬ್ಬಿರುವ ಘಟ್ಟಪ್ರದೇಶದಲ್ಲಿ ಸುಮಾರು ಸಾವಿರ ವರ್ಷಗಳ ಕಾಲ ಆಳಿದರು. ಇದು ಕರ್ನಾಟಕ ಇತಿಹಾಸದಲ್ಲೇ ಒಂದು ದಾಖಲೆ. ಕಾಲಕಾಲಕ್ಕೆ ರಾಜಧಾನಿಗಳನ್ನು ಬದಲಾಯಿಸಿದರು. ಹನ್ನೆರಡನೆಯ ಶತಮಾನದಲ್ಲಿ ಮೂಡಿಗೆರೆ ತಾಲೂಕಿನ ಕಳಸದಲ್ಲಿ ರಾಜಧಾನಿ ಸ್ಥಾಪಿಸಿದರು. ಘಟ್ಟದ ಕೆಳಗಿನ ಸಿಸುಗಲ್, ದಕ್ಷಿಣ ಕನ್ನಡ ಜಿಲ್ಲೆಯ ಕೆರೆವಾಸೆ ಮತ್ತು ಕಾರ್ಕಳಗಳಿಂದಲೂ ಆಳಿದರು. ಕೆಳದಿ ನಾಯಕರ ಕಾಲದಲ್ಲಿ ಇವರ ಆಳ್ವಿಕೆ ಕೊನೆಗೊಂಡಿತು. ಕೆಳದಿಯ ರಾಜರ ಆಳ್ವಿಕೆಯಲ್ಲಿ (ಹದಿನೇಳನೇ ಶತಮಾನ) ಕ್ರೈಸ್ತಧರ್ಮಕ್ಕೆ ಪ್ರೋತ್ಸಾಹ ದೊರೆತ ವಿಚಾರ ಜನಜನಿತ *(ನೋಡಿ : ದೊ. ಪಿಯುಸ್ ಫಿದೆಲಿಸ್ ಪಿಂಟೊ ಅವರ ದೇಸಾಂತರ್ ಥಾವ್ನ್ ಬಂಧಡೆಕ್, 1999, ಪು. 26–36).*

ಶಿಸ್ತಿನ ಶಿವಪ್ಪನಾಯಕನ ಕಾಲಕ್ಕೆ ಚಿಕ್ಕಮಗಳೂರು ಪ್ರದೇಶದಲ್ಲಿ ಕ್ರೈಸ್ತರಿದ್ದ ವಿಚಾರ ತಿಳಿಯುತ್ತದೆ. ಈ ಆಧಾರದ ಮೇಲೆ ಚಿಕ್ಕಮಗಳೂರು ಧರ್ಮಕ್ಷೇತ್ರಕ್ಕೆ ಹದಿನೇಳನೇ ಶತಮಾನದ ಉತ್ತರಾರ್ಧದಲ್ಲೇ ಕ್ರೈಸ್ತಧರ್ಮ ಕಾಲಿಟ್ಟಿತ್ತು ಎಂದು ಹೇಳಬಹುದು.

ಕ್ರಮೇಣ ಹೊಯ್ಸಳರು ಮತ್ತು ವಿಜಯನಗರದ ಅರಸರು ಈ ಜಿಲ್ಲೆಯೊಂದಿಗೆ ಸಂಬಂಧ ಇರಿಸಿಕೊಂಡಿದ್ದರೆಂಬುದಕ್ಕೆ ಪುರಾವೆಗಳು ದೊರಕುತ್ತವೆ. ಮೂಡಿಗೆರೆ ತಾಲೂಕಿನ ಅಂಗಡಿ ಗ್ರಾಮದಲ್ಲಿ ರಾಜ್ಯ ಸ್ಥಾಪನೆ ಮಾಡಿ ತಮ್ಮ ರಾಜಧಾನಿಯನ್ನು ಸೊಸೆವೂರು ಅಥವಾ ಶಶಕಪುರ, ಬೇಲೂರು (ಈಗಿನ ಅಂಗಡಿ) ಮತ್ತು ದ್ವಾರಾವತಿಪುರ (ಈಗಿನ ಹಳೆಬೀಡು) ಗಳಿಗೆ ವರ್ಗಾಯಿಸಿದರು. 'ಹೊಯ್‌ಸಳ' ಎಂಬ ಗುರುವಿನಾಜ್ಞೆಗೆ ಮಣಿದು ಸಳ ಹುಲಿಯೊಡೆದು ಹೊಯ್ಸಳ ವಂಶದ ಸ್ಥಾಪಕ ಎಂಬ ವಿಚಾರ ಕೇವಲ ಐತಿಹ್ಯವಷ್ಟೆ. ಅದಕ್ಕೆ ಸಾಕ್ಷ್ಯಾಧಾರಗಳಿಲ್ಲ. ಸೊಸೆವೂರಿನ ಸಮೀಪ ಮೂಡಿಗೆರೆ–ಬೇಲೂರು ಮಾರ್ಗದಲ್ಲಿ 'ಹೊಯಿಸಳಲು' ಎಂಬ ಊರಿದೆ. ಇಲ್ಲಿ ಕೆಲವು ಶಾಸನಗಳೂ ಇವೆ. ಇವುಗಳಲ್ಲಿ ಸಳ ಹೊಯ್ಸಳವಂಶದ ಸ್ಥಾಪಕ ಎಂಬ ವಿಚಾರವೆಲ್ಲೂ ಬಂದಿಲ್ಲ.

ವಿಜಯನಗರ ಸಾಮ್ರಾಜ್ಯ ಶಿಥಿಲಗೊಂಡಾಗ, ಅದರ ಕೊನೆಯ ರಾಜ ಮನೆತನದ ಅರವೀಡು ವಂಶಜ ಮೂರನೇ ಶ್ರೀರಂಗರಾಯನು ಗೋಲ್ಕೊಂಡದ ಸುಲ್ತಾನನಿಂದಾಗಿ ನೆಲೆತಪ್ಪಿ ಹದಿನೇಳನೇ ಶತಮಾನದ ಮಧ್ಯದಲ್ಲಿ ಬಿದನೂರಿನ ಶಿವಪ್ಪನಾಯಕನ ಸಖ್ಯ ಬೆಳೆಸಿ ಸಕ್ಕರೆಪಟ್ಟಣದಲ್ಲಿ ನೆಲೆಗೊಂಡನು. ಅವನಿಗೆ ಶಿವಪ್ಪನಾಯಕ

ಬೇಲೂರು ಪಾಳೆಯಪಟ್ಟವನ್ನು ನೀಡಲಾಗಿತ್ತು. ಹೀಗಾಗಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮತ್ತು ಅವಸಾನಗಳೆರಡರಲ್ಲೂ ಚಿಕ್ಕಮಗಳೂರು ಜಿಲ್ಲೆ ಸಂಬಂಧ ಹೊಂದಿದ್ದು ಒಂದು ಐತಿಹಾಸಿಕ ವ್ಯಂಗ್ಯ.

ಅನಂತರ ಕ್ರಮವಾಗಿ ಚಿಕ್ಕಮಗಳೂರು ಪ್ರಾಂತ್ಯವನ್ನು ಕೆಳದಿಯ ನಾಯಕರು, ತರೀಕೆರೆ ಪಾಳೆಯಗಾರರು, ಐಗೂರು ಪಾಳೆಯಗಾರರು ಮತ್ತು ಮೈಸೂರು ಒಡೆಯರು ಆಳಿದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರೂ ಆಡಳಿತ ನಡೆಸಿದರು. 1799ರಲ್ಲಿ ಮೈಸೂರು ಒಡೆಯರು ಮತ್ತೆ ಅಧಿಕಾರ ಪಡೆದಾಗ ಈ ಜಿಲ್ಲೆ ಅವರಿಗೆ ಸೇರಿತು. ಕಮೀಷನರ ಆಡಳಿತ ಕಾಲದಲ್ಲಿ ಈ ಜಿಲ್ಲೆಯ ಕೆಲಭಾಗಗಳು ನಗರ ವಿಭಾಗಕ್ಕೆ ಸೇರಿದ್ದವು. 1863ರಲ್ಲಿ ಕಡೂರು ಜಿಲ್ಲೆಯನ್ನು ರಚಿಸಿ, ಕಡೂರನ್ನು ಜಿಲ್ಲಾ ಕೇಂದ್ರವಾಗಿಸಲಾಗಿತ್ತು. 1865ರಲ್ಲಿ ಚಿಕ್ಕಮಗಳೂರನ್ನು ಜಿಲ್ಲಾಕೇಂದ್ರ ಮಾಡಲಾಯಿತು. ಆಗ ಬೇಲೂರು ತಾಲೂಕು ಒಳಗೊಂಡಂತೆ ಹಾಸನ ಜಿಲ್ಲೆಯ ಕೆಲವು ಭಾಗಗಳು ಈ ಜಿಲ್ಲೆಗೆ ಸೇರಿದ್ದವು. 1886ರಲ್ಲಿ ಹಾಸನ ಜಿಲ್ಲೆ ಅಸ್ತಿತ್ವಕ್ಕೆ ಬಂದಾಗ ಚಿಕ್ಕಮಗಳೂರು ಜಿಲ್ಲೆ ಈಗಿನ ಸ್ವರೂಪ ಪಡೆಯಿತು. 1947ರ ವರೆಗೂ ಈ ಜಿಲ್ಲೆಯನ್ನು ಕಡೂರು ಜಿಲ್ಲೆಯೆಂದೇ ಕರೆಯಲಾಗುತ್ತಿತ್ತು. ಅನಂತರ ಚಿಕ್ಕಮಗಳೂರು ಜಿಲ್ಲೆಯೆಂದು ಕರೆಯಲಾಯಿತು.

**ಚಿಕ್ಕಮಗಳೂರಿಗೆ ಕ್ರೈಸ್ತಧರ್ಮ ಪ್ರವೇಶ :**

ಚಿಕ್ಕಮಗಳೂರಿಗೆ ಕ್ರೈಸ್ತಧರ್ಮದ ಪ್ರವೇಶ ಯಾವಾಗ ಆಯಿತೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಕರ್ನಾಟಕಕ್ಕೆ ಕ್ರೈಸ್ತಧರ್ಮ ಕ್ರಿಸ್ತಶಕ ಆರನೆಯ ಶತಮಾನದಲ್ಲೇ ಬಂದಿತು ಎಂಬುದನ್ನು ಒಪ್ಪುವುದಾದರೆ, ಅದು ಚಿಕ್ಕಮಗಳೂರಿಗೆ ಹೆಚ್ಚು ಕಡಿಮೆ ಅದೇ ಅವಧಿಯಲ್ಲಿ ಕ್ರೈಸ್ತಧರ್ಮದ ಪ್ರವೇಶವಾಗಿರಲೇಬೇಕು. ಏಕೆಂದರೆ ಅಂದು ಚಿಕ್ಕಮಗಳೂರಿನ ಭೌಗೋಳಿಕ ವ್ಯಾಪ್ತಿ ಈಗಿನಷ್ಟು ಸೀಮಿತವಾಗಿರಲಿಲ್ಲ. ಅಲ್ಲದೆ ಅದು ಘಟ್ಟ ಪ್ರದೇಶವಾಗಿ ಆಗಾಗಲೇ ಕರಾವಳಿಯ ಜೊತೆ ವ್ಯಾಪಾರ ವ್ಯವಹಾರವನ್ನು ನಡೆಸುತ್ತಿತ್ತು. ಕಲ್ಯಾಣಪುರದಲ್ಲಿ ಆಗ ಬಿಷಪರೊಬ್ಬರು ಇದ್ದರೆಂದಾದರೆ ಚಿಕ್ಕಮಗಳೂರು ಪ್ರಾಂತ್ಯದಲ್ಲಿ ಕ್ರೈಸ್ತರು ಇದ್ದಿರಲೇಬೇಕು: ಇದು ಹೆಚ್ಚಿನ ಸಂಶೋಧನೆಯಿಂದ ಜಾಹೀರಾಗ ಬೇಕಷ್ಟೆ.

ಕ್ರಿ.ಶ. ಆರನೆಯ ಶತಮಾನವನ್ನು ಬಿಟ್ಟರೆ ಮುಂದೆ ಕ್ರಿ.ಶ. ಹದಿನಾರನೇ ಶತಮಾನದಲ್ಲಿ ಚಿಕ್ಕಮಗಳೂರಿಗೆ ಕ್ರೈಸ್ತಧರ್ಮ ಪ್ರವೇಶವಾಯಿತು ಎಂದು ಖಂಡಿತವಾಗಿ ಹೇಳಬಹುದು. ಇದಕ್ಕೆ ಮುಖ್ಯ ಕಾರಣವೆಂದರೆ ಚಿಕ್ಕಮಗಳೂರಿಗೆ ಕಾಫಿಯ ಪ್ರವೇಶವಾದದ್ದು. ಕಾಫಿಗಿಡ ಭಾರತಕ್ಕೆ ಯಾವಾಗ ಬಂದಿತೆಂದು ಖಚಿತವಾಗಿ ಹೇಳಲಾಗುವುದಿಲ್ಲ ಮತ್ತು ಅದು ಚಿಕ್ಕಮಗಳೂರಿನಲ್ಲೇ ಮೊದಲಿಗೆ ಬೆಳೆಯಲಾಯಿತೇ ಅಥವಾ ಬೇರೆ ಕಡೆಯೇ ಎಂಬುದನ್ನು ನಿಶ್ಚಿತವಾಗಿ ಹೇಳಲಿಕ್ಕಾಗುವುದಿಲ್ಲ. ಆದರೆ ಇಲ್ಲಿಯತನಕ ದೊರೆತಿರುವ ದಾಖಲೆಗಳು ಮತ್ತು ಜನರಲ್ಲಿ ಪ್ರಚಲಿತವಾಗಿರುವ ಕಥೆಗಳ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೊತ್ತಮೊದಲಿಗೆ ಕಾಫಿ ಬೆಳೆ

ಆರಂಭವಾಯಿತೆಂದು ಊಹಿಸಬಹುದು. ಚಿಕ್ಕಮಗಳೂರು ಜಿಲ್ಲೆಯ ತುಂಬಾ ಎತ್ತರದ ಗಿರಿಗಳಿದ್ದು ಕಾಫಿ ಬೆಳೆಗೆ ಯೋಗ್ಯವಾಗಿವೆ. ಉತ್ತರದ ಹಿಮಾಲಯ ಪರ್ವತ ಮತ್ತು ದಕ್ಷಿಣದ ನೀಲಗಿರಿಯನ್ನು ಬಿಟ್ಟರೆ ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ ಭಾರತದಲ್ಲೇ ಅತ್ಯಂತ ಎತ್ತರವಾದ ಗಿರಿ. ಅಲ್ಲದೆ ಚಂದ್ರಗಿರಿಯಿಂದ ಹಲವಾರು ಹಳ್ಳಗಳು ಹರಿದು ಸುತ್ತಲ ಪ್ರದೇಶವನ್ನು ಫಲವತ್ತಾಗಿಸಿದೆ, ನೆಲವೂ ಉತ್ಕೃಷ್ಟವಾಗಿದೆ. ಈ ಕಾರಣದಿಂದಲೇ ಚಂದ್ರಗಿರಿಯ ಸುತ್ತಲ ಪ್ರದೇಶವನ್ನು ಹಿಂದೆ "ಹೊನ್ನು-ಜವಣೆಗೆ" ಎಂದು ಕರೆಯಲಾಗುತ್ತಿತ್ತು ಎನ್ನುತ್ತಾರೆ ಶಾಸನ ಪಿತಾಮಹಾ ಲೂಯಿರೈಸ್. ಇಂತಹ ನಾಡಿಗೆ ಬಾಬಾ ಬುಡನ್ ಸಾಹಿಬ್ ಮೆಕ್ಕಾದಿಂದ ಬರುವಾಗ ಕಾಫಿ ಬೀಜ ತಂದರು ಎಂಬ ಐತಿಹ್ಯವಿದೆ. ಆತ 1600ರಿಂದ 1615ರ ಅವಧಿಯಲ್ಲಿ ಏಳು ಕಾಫಿ ಬೀಜಗಳನ್ನು ತಂದು ಕಾಫಿ ಬೆಳೆಸಿದನೆಂಬ ನಂಬಿಕೆ ಇಲ್ಲಿನ ಜನಪದರದು. ಅದೇನೇ ಇರಲಿ, 1616ರಿಂದಲೇ ಕಾಫಿಯ ಉಪಯೋಗ ಭಾರತದಲ್ಲಿತ್ತೆಂದು ಇತಿಹಾಸಕಾರರು ಹಾಗೂ ಪ್ರವಾಸಿಗಳ ಹೇಳಿಕೆಗಳಿಂದ ತಿಳಿದು ಬರುತ್ತದೆ. ಈಸ್ಟ್ ಇಂಡಿಯಾ ಕಂಪನಿಯ ಕೋರಿಕೆಯಂತೆ ಇಂಗ್ಲೆಂಡಿನ ರಾಜನು ಸರ್ ಥಾಮಸ್ ರೋ. (Sir Thomas Roe) ಎಂಬ ರಾಯಭಾರಿಯನ್ನು ಮೊಗಲ್ ಚಕ್ರವರ್ತಿ ಷಾಜಹಾನನ ಆಸ್ಥಾನಕ್ಕೆ ಕಳಿಸಿದ್ದನು. ಆತ ಇಲ್ಲಿ 1615ರಿಂದ 1619ರವರಗೆ ಇದ್ದನು. ಆತನ ಖಾಸಗಿ ಪಾದ್ರಿ ಎಡ್ವರ್ಡ್ ಟೆರ್ರಿ (Edward Terry) ತನ್ನ ಪ್ರವಾಸಕಥನದಲ್ಲಿ ಭಾರತದಲ್ಲಿನ ಕಾಫಿಯ ಉಪಯೋಗವನ್ನು ಕುರಿತು ಹೇಳಿದ್ದಾನೆ. ***(ನೋಡಿ : ಎಚ್.ಎಲ್. ನಾಗೇಗೌಡ, ಪ್ರವಾಸಿ ಕಂಡ ಇಂಡಿಯಾ, ಸಂಪುಟ 3).***

ಟೆರ್ರಿಯ ನಂತರ ಐವತ್ತು ವರ್ಷಗಳ ಮೇಲೆ (1669 – 1679) ಥಾಮಸ್ ಬೌರಿ (Thomas Bowrey) ಎಂಬ ಪ್ರವಾಸಿ ಗೋಲ್ಕೊಂಡಾ ರಾಜನಾದ ಅಬ್ದುಲ್ ಹಸನ್‌ಷಾನ ಆಸ್ಥಾನಕ್ಕೆ ಬಂದಿದ್ದ. ಆತ ಭಾರತದಲ್ಲಿ ಕಾಫಿ ಸೇವನೆ ಕುರಿತು ಹೇಳಿದ್ದಾನೆ. ಈ ದಾಖಲೆಗಳನ್ನು ನೋಡಿದರೆ ಕ್ರಿ.ಶ.16–17ನೇ ಶತಮಾನದ ಹೊತ್ತಿಗೆ ಕಾಫಿ ಬೆಳೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ತು ಎಂದು ಹೇಳಬಹುದು. ಆದ್ದರಿಂದ ಈ ಅವಧಿಯಲ್ಲಿ ಚಿಕ್ಕಮಗಳೂರಿಗೆ ಕ್ರೈಸ್ತರ ಪ್ರವೇಶವಾಗಿರಲೇಬೇಕು.

ಬ್ರಿಟಿಷರ ಆಳ್ವಿಕೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ರೈಸ್ತರು ಪ್ರಬಲವಾಗಿದ್ದರು ಎಂದು ತಿಳಿದು ಬರುತ್ತದೆ. 1830ರಲ್ಲಿ ಥಾಮಸ್ ಕ್ಯಾನಾನ್ (Thomas Cannon) ಎಂಬಾತ ಚಿಕ್ಕಮಗಳೂರು ಬಳಿ ಮೈಲ್‌ಮನೆ ಎಂಬಲ್ಲಿ ಕಾಫಿ ತೋಟ ಮಾಡಿದನೆಂದು ಹೇಳುವ ಮಾತಿದೆ. 1823–25ರ ಅವಧಿಯಲ್ಲಿ ಪ್ಯಾರಿ ಅಂಡ್ ಕಂಪನಿಯ ಮಿಸ್ಟರ್ ಜಾಲಿ (Mr. Jolly) ಶಿವಮೊಗ್ಗ ಜಿಲ್ಲೆಯ ನಗರದಲ್ಲಿ ಮೊದಲು ಕಾಫಿ ಬೆಳೆ ಬೆಳೆಸಿದ. 1835ರಲ್ಲಿ ಮೈಸೂರು ಕಮೀಷನಿನ ಮಿಸ್ಟರ್ ಹೆಚ್. ಸ್ಟೋಕ್ಸ್ (Mr. H. Stockes) ಶಿವಮೊಗ್ಗ ಬಳಿ ಕಾಫಿತೋಟ ಮಾಡಿದ ದಾಖಲೆ ಇದೆ. 1843ರಲ್ಲಿ ಫ್ರೆಡರಿಕ್ ಗ್ರೀನ್ (Frederic Green) ಎಂಬವನು ಮುಜರಾಬಾದ್ ಪ್ರದೇಶದಲ್ಲಿ ಅಂದರೆ ಸಕಲೇಶಪುರಕ್ಕೆ ದಕ್ಷಿಣದಲ್ಲಿರುವ ಐಗೂರು ಎಂಬಲ್ಲಿ ಭೂಮಿ ಪಡೆದು ತೋಟ

ಮಾಡಿದ. ಮೂಡಿಗೆರೆ ತಾಲೂಕಿನ ಬಾಳೂರು ತೋಟವೂ ಇಂಗ್ಲಿಷರಿಂದ 1841ರಲ್ಲಿ ಆರಂಭವಾಯಿತು. 1844ರಲ್ಲಿ ಫ್ರೆಡ್ ಮೆಪ್ಪೆನ್ (Freed Meppen) ಎಂಬವನು ಕಡೂರು ಬಳಿ ಎಮ್ಮೆದೊಡ್ಡಿ ತೋಟ ಆರಂಭಿಸಿದ. ***(ನೋಡಿ : ಎಚ್.ಎಲ್.ನಾಗೇಗೌಡ, ಬೆಟ್ಟದಿಂದ ಬಟ್ಟಲಿಗೆ, 1983, ಪುಟ 70–76).*** ಈ ಕಾಫಿ ತೋಟದ ಬೆಳವಣಿಗೆಯನ್ನು ನೋಡಿದರೆ 1830ರಲ್ಲಿ ಚಿಕ್ಕಮಗಳೂರು ಪ್ರಾಂತ್ಯಕ್ಕೆ ಕ್ರೈಸ್ತಧರ್ಮ ಬಂದಿತ್ತು ಎಂದು ಹೇಳಬಹುದು.

ಶಿವಮೊಗ್ಗಕ್ಕೆ 1680ರಲ್ಲಿ ಕ್ರೈಸ್ತಧರ್ಮದ ಪ್ರವೇಶವಾಗಿತ್ತೆಂತಲೂ ಸಂತ ಜೋಸೆಫ್ ವಾಸ್ ಅಲ್ಲಿ ಇದ್ದನೆಂತಲೂ ಮೌಖಿಕ ದಾಖಲೆಯಿದೆ. ಅಲ್ಲಿನ ಮೊದಲ ಚರ್ಚನ್ನು 1723ರಲ್ಲಿ ಕಟ್ಟಿದ ಲಿಖಿತ ದಾಖಲೆ ಇದೆ. ಅಂದಮೇಲೆ ಹೆಚ್ಚು ಕಡಿಮೆ ಅದೇ ಕಾಲದಲ್ಲಿ ಚಿಕ್ಕಮಗಳೂರಿಗೂ ಕ್ರೈಸ್ತಧರ್ಮದ ಪ್ರವೇಶವಾಗಿರುವುದನ್ನು ತಳ್ಳಿ ಹಾಕುವಂತಿಲ್ಲ. ಅಂದು ಶಿವಮೊಗ್ಗದ ಧರ್ಮಗುರುಗಳು ಚಿಕ್ಕಮಗಳೂರಿನ ಕ್ರೈಸ್ತರ ಆಧ್ಯಾತ್ಮ ವಿಚಾರಗಳನ್ನು ನೋಡಿಕೊಳ್ಳುತ್ತಿದ್ದರು. 1864ರಲ್ಲಿ ಚಿಕ್ಕಮಗಳೂರಿನ ಸ್ಥಳೀಯರಿಗೆ ಮೊದಲ ಜ್ಞಾನಸ್ನಾನ ನೀಡಿದ ಬಗ್ಗೆ ಶಿವಮೊಗ್ಗದ ಪವಿತ್ರ ದೇವಾಲಯ ದಲ್ಲಿ ದಾಖಲೆ ಇದೆ. ಅಲ್ಲದೆ ಚಿಕ್ಕಮಗಳೂರು ಧರ್ಮಕ್ಷೇತ್ರಕ್ಕೆ ಸೇರಿದ ಹಾಸನ ಜಿಲ್ಲೆಗೆ 1690ರ ಹೊತ್ತಿಗೆ ಕ್ರೈಸ್ತಧರ್ಮದ ಪ್ರವೇಶವಾಗಿರುವುದಕ್ಕೆ ನಿಖರ ದಾಖಲೆಗಳಿವೆ. ಈ ಒಟ್ಟಾರೆ ಕಾಣಗಳಿಂದ ಚಿಕ್ಕಮಗಳೂರು ಧರ್ಮಕ್ಷೇತ್ರ (Diocese)ಕ್ಕೆ ಕ್ರೈಸ್ತಧರ್ಮ 1680–90ರ ಅವಧಿಯಲ್ಲಿ ಪ್ರವೇಶಿಸಿತು ಎಂಬುದನ್ನು ಯಾವುದೇ ಕಾರಣಕ್ಕೂ ತಳ್ಳಿ ಹಾಕುವಂತಿಲ್ಲ.

✣ ✣ ✣

# ಅಧ್ಯಾಯ : ೫

## ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗಗಳನ್ನೊಳಗೊಂಡ ಚಿಕ್ಕಮಗಳೂರು ಧರ್ಮಕ್ಷೇತ್ರ

ಚಿಕ್ಕಮಗಳೂರು ಧರ್ಮಕ್ಷೇತ್ರ ಮೂರು ಜಿಲ್ಲೆಗಳನ್ನು ಒಳಗೊಂಡು ರಚನೆಯಾಗುವ ಮೊದಲು ಇದು ಮೈಸೂರು ಮತ್ತು ಕೆನರಾ ಮಿಷನ್ನಿಗೆ ಸೇರಿದ್ದು




ಗೋವಾದ (Ecclesiastical Jurisdiction) ಮಹಾ ಧರ್ಮಕ್ಷೇತ್ರದ ಆಡಳಿತಕ್ಕೆ ಒಳಪಟ್ಟಿತ್ತು. ಕ್ರೈಸ್ತರ ಸಂಖ್ಯೆ ಈ ಧರ್ಮ ಕ್ಷೇತ್ರದಲ್ಲಿ ಅಧಿಕವಾದಂತೆ ಇದನ್ನು ಒಂದು ಧರ್ಮ ಕ್ಷೇತ್ರವಾಗಿ ಮಾಡಬೇಕಾದ ಅಗತ್ಯ ಬಂದಿತು. ಬೇಡಿಕೆಯೂ ಇತ್ತು. 16.11.1963ರಲ್ಲಿ ವ್ಯಾಟಿಕನ್‌ನಿಂದ 'ಇಂದಿಚೆ ರೇಜಿಯೋನಿಸ್' ಎಂಬ ಪ್ರೇಷಿತ ಶಾಸನವನ್ನು ಹೊರಡಿಸಿ ಅಂದಿನ ಪೋಪ್ ವಿಶ್ವಗುರು ಆರನೆ ಪಾಲ್ ಅವರು ಮೈಸೂರು ಧರ್ಮಕ್ಷೇತ್ರದಿಂದ ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಬೇರ್ಪಡಿಸಿ "ಚಿಕ್ಕಮಗಳೂರು ಧರ್ಮಕ್ಷೇತ್ರ"ವನ್ನು ಸ್ಥಾಪಿಸಿದರು. ಅತಿ. ವಂ.ಡಾ.ಅಲ್ಫೊನ್ಸ್ ಮತಿಯಾಸ್ ಅವರು ಇಲ್ಲಿ ಮೊದಲ ಬಿಷಪರಾಗಿ ನೇಮಕವಾದರು. 16.11.1963ರಲ್ಲಿ ಅಂದಿನ ಪೋಪ್ 6ನೇ ಪೌಲ್ ಅವರು ಚಿಕ್ಕಮಗಳೂರು ಧರ್ಮಕ್ಷೇತ್ರವನ್ನು ಮೈಸೂರು ಧರ್ಮಕ್ಷೇತ್ರದಿಂದ ಬೇರ್ಪಡಿಸಿ, ಸ್ವತಂತ್ರ ಧರ್ಮಕ್ಷೇತ್ರವನ್ನಾಗಿ ಮಾಡಿ ಹೊರಡಿಸಿದ ಪ್ರೇರಿತ ಶಾಸನ ಹೀಗಿದೆ :

**ಚಿಕ್ಕಮಗಳೂರು ಧರ್ಮಕ್ಷೇತ್ರದ ಸ್ಥಾಪನಾ ಪರಿಪತ್ರ :**

ಪೌಲ್, ಬಿಷಪ್, ದೇವಸೇವಾನಿರತ ಸೇವಕರ ನಿರಂತರ ಸ್ಮರಣಾರ್ಥ –

ಭಾರತದ ಪರಿಸ್ಥಿತಿಯಲ್ಲಿ ಇಂದು ಜನಸಂಖ್ಯೆ ಅಧಿಕವಾಗಿದ್ದು, ಇಲ್ಲಿನ ಕಥೋಲಿಕರ ಜೀವನ ದಿನದಿಂದ ದಿನಕ್ಕೆ ಫಲಭರಿತವಾಗಿ ಬೆಳೆಯುತ್ತಿದ್ದು ನಮ್ಮ ಗಮನವನ್ನು ಸೆಳೆದಿದೆ. ಅಗತ್ಯವಾದ ಸೌಲಭ್ಯಗಳನ್ನು ನೀಡಿದ್ದೇ ಆದರೆ, ಅಲ್ಲಿನ

ಸ್ಥಳೀಯರಿಗೆ ಕ್ರಿಸ್ತನ ಧರ್ಮವನ್ನು ಯತೇಚ್ಛವಾಗಿ ಪ್ರಚಾರ ಮಾಡಬಹುದೆಂಬುದು ನಮ್ಮ ನಂಬಿಕೆ. ಆದ್ದರಿಂದ ವಿಶ್ವಾಸ ಪ್ರಚಾರ ಸಭೆಯವರ ಅಭಿಪ್ರಾಯದಂತೆ ಮೈಸೂರು ಧರ್ಮಕ್ಷೇತ್ರದಿಂದ ಹೊರಪಡಿಸಿ ಹೊಸ ಧರ್ಮಕ್ಷೇತ್ರವೊಂದನ್ನು ನಿರ್ಮಿಸುವ ನಿರ್ಧಾರ ವನ್ನು ನಾವು ಅನುಮೋದಿಸುತ್ತೇವೆ. ಸದ್ಯ ಪ್ಯಾರಿಸ್ ಫಾರಿನ್ ಮಿಶನ್ ಸೊಸೈಟಿಯ ಅಧೀನದಲ್ಲಿರುವ ಮೈಸೂರು ಧರ್ಮಕ್ಷೇತ್ರವನ್ನು ವಿಭಜಿಸಲು ಸೊಸೈಟಿಯ ಮಾಡ ರೇಟರ್ ಜನರಲ್ ಅವರನ್ನು ವಿಶ್ವಾಸ ಪ್ರಚಾರ ಸಭೆ ಕೇಳಿಕೊಂಡಿದೆ. ಆದ್ದರಿಂದ ನಮ್ಮ ಅತ್ಯುಚ್ಛ ಅಪೊಸ್ತಲಿಕ ಅಧಿಕಾರದಿಂದ ಈಗಿರುವ ಧರ್ಮಕ್ಷೇತ್ರವನ್ನು ಶಿವ ಮೊಗ್ಗ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳನ್ನು ಅದೇ ನಾಗರೀಕ ಸರಹದ್ದಿನ್ನೊಳ ಗಿರಿಸಿ ಚಿಕ್ಕಮಗಳೂರು ಧರ್ಮಕ್ಷೇತ್ರವನ್ನಾಗಿ ಪರಿವರ್ತಿಸುತ್ತೇವೆ. ಹೊಸ ಧರ್ಮಕ್ಷೇತ್ರವು ಬೆಂಗಳೂರು ಮಹಾಧರ್ಮಕ್ಷೇತ್ರದ ಅಧೀನಕ್ಕೆ ಒಳಪಡುತ್ತದೆ. ಹಾಗೆಯೇ ಇಲ್ಲಿನ ಬಿಷಪರು ಬೆಂಗಳೂರು ಧರ್ಮಕ್ಷೇತ್ರದ ಮಹಾಧರ್ಮಾಧ್ಯಕ್ಷರ ಆಳ್ವಿಕೆಗೆ ಒಳಪಡುತ್ತಾರೆ. ಅಲ್ಲದೆ ಹೊಸ ಧರ್ಮಕ್ಷೇತ್ರವನ್ನು ಕಥೋಲಿಕ ಧರ್ಮಸಭೆಯ ಉನ್ನತ ಒಳಿತಿಗಾಗಿ ಸ್ಥಳೀಯ ಸೆಕ್ಯುಲರ್ ಗುರುಗಳ ಅಧೀನಕ್ಕೆ ಒಪ್ಪಿಸುತ್ತೇವೆ. ಚಿಕ್ಕಮಗಳೂರು ಬಿಷಪರು ಅದೇ ನಗರದಲ್ಲಿ ತಮ್ಮ ಆಳ್ವಿಕೆಯ ವಾಸಸ್ಥಾನವನ್ನು ಮಾಡಿಕೊಂಡು ಚಿಕ್ಕಮಗಳೂರಿನ ಸೈಂಟ್ ಜೋಸೆಫ್ಸ್ ಚರ್ಚನ್ನು ತಮ್ಮ ಸ್ಥಾನಮಾನದ ಚರ್ಚಾಗಿಸಿ ಕೊಳ್ಳುವುದು. ಧರ್ಮಕ್ಷೇತ್ರದ ಆಡಳಿತದಲ್ಲಿ ತಮಗೆ ನೆರವಾಗಲು ಸಲಹೆ ಸಹಕಾರ ನೀಡಲು ಅವರು ಕ್ಯಾನಾನ್ ಕಾನೂನಿನ ಪ್ರಕಾರ ಗುರುಗಳ ಸಲಹಾ ಮಂಡಳಿಯನ್ನು ಸ್ಥಾಪಿಸಿಕೊಳ್ಳುವುದು ಮತ್ತು ಕೊನೆಯದಾಗಿ ದೈವವಾಕ್ಯಕ್ಕೆ ಓಗೊಟ್ಟು ಬಂದು ಗುರುಗಳಾಗಲು ಇಚ್ಛಿಸುವ ಯುವಕರಿಗಾಗಿ ಕಿರಿಯ ಗುರುಮಠವನ್ನು ಸ್ಥಾಪಿಸಿಕೊಳ್ಳುವುದು. ಚಿಕ್ಕಮಗಳೂರು ಧರ್ಮಕ್ಷೇತ್ರವನ್ನು ಯಾರ ಸಲಹೆಯ ಮೇರೆಗೆ ಸ್ಥಾಪಿಸಿದ್ದೇವೊ ಆ ಭಾರತದ ಅಪೋಸ್ತಲಿಕ ಇಂಟರ್‌ನುನ್ಸಿಯೊ ಅವರಿಗೆ ಈ ಎಲ್ಲವನ್ನೂ ನಿರ್ವಹಿಸುವ ಅಧಿಕಾರ ವನ್ನು ನಾವು ವರ್ಗಾಯಿಸುತ್ತೇವೆ. ಅವರು ಯಾಜಕ ಸ್ಥಾನಕ್ಕೆ ಯಾರನ್ನಾದರೂ ಈ ಕಾರ್ಯಕ್ಕೆ ನೇಮಿಸಬಹುದು. ಕಾರ್ಯನಿರ್ವಾಹಕರು ಯಥಾಪ್ರಕಾರವಾಗಿ ದಾಖಲೆ ಪತ್ರಗಳನ್ನು ಸಿದ್ಧಮಾಡಿ ಅಧಿಕೃತವಾಗಿ ಸಹಿ ಮಾಡಿ ಮೊಹರು ಮಾಡಿ, ವಿಶ್ವಾಸ ಪ್ರಚಾರ ಪವಿತ್ರ ಸಭೆಗೆ ತಲುಪಿಸುವುದು ಈ ಸಂವಿಧಾನ ಇಂದು ಮತ್ತು ಮುಂದೆಯೂ ಬದ್ಧವಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಆತ್ಮಸಾಕ್ಷಿಯಾಗಿ ಈ ಡಿಕ್ರಿಗೆ ಬದ್ಧರಾಗಿ ಪರಿಣಾಮಕಾರಿಯಾಗಿರುವಂತೆ ನೋಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಅವರು ನಮ್ಮ ಮುದ್ರೆಯಿರುವ ಈ ದಾಖಲಾತಿಯನ್ನು ತಿರುಚಬಾರದು. ಈ ಸಂವಿಧಾನದ ನಕಲು ಮಾಡುವಾಗಲೂ ಅಥವಾ ಮುದ್ರಿಸುವಾಗಲೂ ಇದರ ಮೇಲಿನ ಯಾಜಕಾಧಿ ಕಾರದ ಮುದ್ರೆಯನ್ನು ಅಳಿಸಬಾರದು. ಅಲ್ಲದೆ ಸಾರ್ವಜನಿಕ ನೋಟರಿಯಿಂದ ಪಡೆದಾಗಲೂ ಇದರ ಮೂಲದ ಬೆಲೆಯನ್ನು ಕಳೆದುಕೊಳ್ಳದೆ ಮೂಲ ಪ್ರತಿಯನ್ನೇ ಹೋಲಬೇಕು.

ನಮ್ಮ ಅಧಿಕಾರಾವಧಿಯ ಮೊದಲನೆಯ ವರ್ಷದಲ್ಲಿ ಎಂದರೆ ನಮ್ಮ ಪ್ರಭುವಿನ ಒಂದು ಸಾವಿರದ ಒಂಬೈನೂರ ಅರತ್ಮೂರು ನವೆಂಬರ್ ಹದಿನಾರನೇ ದಿನ ರೋಮಿನ ಸಂತ ಪೇತ್ರನ ಸನ್ನಿಧಿಯಲ್ಲಿ ಇದನ್ನು ನೀಡಲಾಗಿದೆ.

VIನೇ ಪೌಲ್ ಪಿಪಿ
ಜೇಕೊಬ್ ಅಲೋಕಿಯಸ್ ಕಪೆಲ್ಲೊ
ಚಾನ್ಸಲರ್ ಎಸ್.ಆರ್.ಇ.

ಗ್ರೆಗರಿ ಪಿ ಕಾರ್ಡ್
ಅಗಗೈನಿಯನ್
ಪ್ರಿಫೆಕ್ಟ್ ಎಸ್.ಸಿ
ಆಫ್ ಪ್ರೊಪಗಾಂಡ ಪೀದೆ

**ಹೊಸ ಧರ್ಮಕ್ಷೇತ್ರದ ಮೊದಲ ಬಿಷಪ್ :**

ಡಿಸೆಂಬರ್ 7, 1963ರ ರಾತ್ರಿ ವ್ಯಾಟಿಕನ್ ರೇಡಿಯೊ ಹೊಸದಾಗಿ ಸ್ಥಾಪಿತವಾದ ಚಿಕ್ಕಮಗಳೂರು ಧರ್ಮಕ್ಷೇತ್ರದ ನೂತನ ಬಿಷಪರ ಆಯ್ಕೆಯನ್ನು ಪ್ರಪಂಚದಾದ್ಯಂತ ಬಿತ್ತರಿಸಿತು. ಚಿಕ್ಕಮಗಳೂರು ಧರ್ಮಕ್ಷೇತ್ರದ ಸ್ಥಾಪನೆಯೊಡನೆ ದಕ್ಷಿಣ ಕನ್ನಡ ಜಿಲ್ಲೆಯ ಮೊನ್ಸಿಜ್ಞರ್ ಅಲ್ಫೋನ್ಸಸ್ ಮತಿಯಾಸರನ್ನು, ಪವಿತ್ರ ತಂದೆ ಪೋಪ್ 6ನೇ ಪೌಲ್ ಅವರು ನವ ಬಿಷಪರನ್ನಾಗಿಸಿ ಪ್ರಕಟಿಸಿದರು. ಡಾ. ಮತಿಯಾಸ್ ಅವರು ಫೆಬ್ರವರಿ 5, 1964ರಲ್ಲಿ ನೂತನ ಧರ್ಮಕ್ಷೇತ್ರದ ಮೊದಲ ಬಿಷಪ್ ಆಗಿ ಅಭಿಷೇಕಿಸಲ್ಪಟ್ಟರು.

**ಅತಿ. ವಂ. ಡಾ. ಅಲ್ಫೋನ್ಸ್ ಮತಿಯಾಸ್**


**ಬಿಷಪ್ ಅ. ಮತಿಯಾಸ್**

ಧರ್ಮಾಧ್ಯಕ್ಷ ಅಲ್ಫೋನ್ಸ್ ಮತಿಯಾಸ್‌ವರು ಸಮರ್ಥ ಆಡಳಿತಗಾರರೂ, ಖಚಿತವಾದ ನಿಲುವುಗಳುಳ್ಳವರೂ, ಆಳವಾದ ಅಧ್ಯಾತ್ಮಿಕ ಶ್ರದ್ಧೆಯುಳ್ಳವರೂ ಆಗಿದ್ದರು. ಆರಂಭದ ದಿನಗಳಲ್ಲಿ ಧರ್ಮಕೇಂದ್ರಗಳೂ ಹಾಗೂ ಯಾಜಕರ ಸಂಖ್ಯೆಯೂ ಕಡಿಮೆ ಇತ್ತು. ಆದರೂ ಆರಂಭದಿಂದಲೇ ಅನೇಕ ಯೋಜನೆಗಳನ್ನು ರೂಪಿಸಿ, ನಿರ್ದಿಷ್ಟವಾದ ಧ್ಯೇಯ–ಧೋರಣೆಗಳನ್ನು ಅನುಸರಿಸಿ, ಖಚಿತವಾದ ನಿಲುವುಗಳನ್ನು ತೆಗೆದುಕೊಂಡಿದ್ದರ ಫಲವಾಗಿ ಧರ್ಮಕ್ಷೇತ್ರವು ಹಂತ ಹಂತವಾಗಿ ಎಲ್ಲಾ ರಂಗಗಳಲ್ಲೂ ಮುನ್ನಡೆ ಸಾಧಿಸುತ್ತಾ ಬಂತು. ಶುಭಸಂದೇಶ ಪ್ರಸಾರವನ್ನು ಪ್ರಧಾನ ಗುರಿಯಾಗಿಟ್ಟು ಕೊಂಡು ಅದಕ್ಕಾಗಿ ಹಲವಾರು ಕೇಂದ್ರಗಳನ್ನು ತೆರೆಯಲಾಯಿತು. ವಿವಿಧ ಮಾರ್ಗಗಳನ್ನು ಅನುಸರಿಸಲಾಯಿತು ಹಾಗೂ ಮೇಲ್ವಿಚಾರಕರನ್ನು ನೇಮಿಸಲಾಯಿತು. ಶುಭಸಂದೇಶ ಪ್ರಸಾರ ಕಾರ್ಯಕ್ಕಾಗಿಯೇ ಕಡೂರು, ಬೀರೂರು, ಗಂಡಸಿ, ಕಲ್ಲತ್ತಿಪುರ, ಸೊರಬ, ಬೇಲೂರು ಹಾಗೂ ತೆರೇಸಾಪುರ ಕೇಂದ್ರಗಳನ್ನು ತೆರೆಯಲಾಯಿತು. ಧರ್ಮಾಧ್ಯಕ್ಷ ಅಲ್ಫೋನ್ಸ್ ಮತಿಯಾಸ್‌ರವರು ಅನೇಕ ಹೊಸ ಧರ್ಮಕೇಂದ್ರಗಳನ್ನು ಸ್ಥಾಪಿಸಿದರು.

ವರ್ಷವರ್ಷವೂ ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ತುಂಬಾ ಮುತುವರ್ಜಿಯಿಂದ ಜಾರಿಗೆ ತರಲು ಪ್ರಯತ್ನಿಸಿದ್ದರಿಂದ ಭಕ್ತಾದಿಗಳ ಅಧ್ಯಾತ್ಮಿಕ ನವೀಕರಣ, ಮಕ್ಕಳ ವಿದ್ಯಾಭ್ಯಾಸ, ಯುವಜನರ ತರಬೇತಿ, ಹಿಂದುಳಿದವರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ, ಆರಾಧನಾ ವಿಧಿಗಳ ಭಾರತೀಕರಣ, ಸಂಸ್ಥೆ ಹಾಗೂ ಧರ್ಮಕೇಂದ್ರಗಳ ಸ್ವಾವಲಂಬನೆ, ಪುಟ್ಟಮಕ್ಕಳ ಮತ್ತು ದುರ್ಬಲರ ಆರೋಗ್ಯ ಸೇವೆ ಇತ್ಯಾದಿಗಳನ್ನು ಸಾಧಿಸಲಾಯಿತು. ಧರ್ಮಾಧ್ಯಕ್ಷರ ದೀಕ್ಷೆಯ ಐದನೇ ವಾರ್ಷಿಕೋತ್ಸವದಂದು (05.02.1969) ಧರ್ಮಾಧ್ಯಕ್ಷರ ಕಛೇರಿ ಹಾಗೂ ನಿವಾಸವಾಗಿರುವ ಜ್ಯೋತಿನಿಲಯವನ್ನು ಉದ್ಘಾಟಿಸಲಾಯಿತು. ಹೊಸ ಕೆಥಿಡ್ರಲ್ ದೇವಾಲಯವನ್ನು ನಿರ್ಮಿಸಿ 08.12.1976 ರಂದು ಪವಿತ್ರೀಕರಿಸಲಾಯಿತು. ಕನ್ಯಾಸ್ತ್ರೀ ಮಠಗಳನ್ನೂ, ಶಾಲೆಗಳನ್ನೂ, ಇತರ ಕೇಂದ್ರಗಳನ್ನು ಸ್ಥಾಪಿಸಿ ಪ್ರತಿವರ್ಷವೂ ಒಂದೊಂದು ಎಂಬಂತೆ ದೇವಾಲಯಗಳ ನಿರ್ಮಾಣ ವನ್ನೂ ಮಾಡಲಾಯಿತು. ಧಾರ್ಮಿಕ ಮಾಸಿಕ ಪತ್ರಿಕೆ 'ನವಜ್ಯೋತಿ'ಯನ್ನು ಆರಂಭಿಸಲಾಯಿತು. ಧರ್ಮಕ್ಷೇತ್ರದ ಪ್ರಕಾಶನಾ ಸಂಸ್ಥೆ ಹಾಗೂ ಧಾರ್ಮಿಕ ಪುಸ್ತಕಗಳ ಮಾರಾಟ ಕೇಂದ್ರ 'ಅಮರವಾಣಿ'ಯನ್ನು ತೆರೆಯಲಾಯಿತು. ಧಾರ್ಮಿಕ ಹಾಗೂ ನೀತಿಭೋಧೆಗೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಈ ಕೇಂದ್ರವು ಹೊರತಂದಿದೆ. ನಿವೃತ್ತ ಹಾಗೂ ಖಾಯಿಲೆಯಲ್ಲಿರುವ ಯಾಜಕರ ನಿಧಿ, ಗೃಹ ಕಾರ್ಮಿಕರ ನಿಧಿ, ವ್ಯಾಟಿಕನ್ ಸಮ್ಮೇಳನ ಸ್ಮಾರಕ ವಿದ್ಯಾನಿಧಿ, ಧರ್ಮಾಧ್ಯಕ್ಷ ಮತಿಯಾಸ್ ಜ್ಯೂಬಿಲಿ ಸ್ಮಾರಕ ಕಾಲೇಜು ವಿದ್ಯಾರ್ಥಿಗಳ ನಿಧಿ–ಇವುಗಳನ್ನು ಆರಂಭಿಸಲಾಯಿತು. ಇವು ಧರ್ಮಾಧ್ಯಕ್ಷರಿಗೆ ಬಡವರ ಮೇಲಿದ್ದ ಕಳಕಳಿಯನ್ನು ವ್ಯಕ್ತಪಡಿಸುತ್ತವೆ. ಧರ್ಮಕ್ಷೇತ್ರದ ಯಾಜಕರಿಗೆ ಶಿಕ್ಷಣಕೂಟಗಳನ್ನು ಆಗಿಂದಾಗ್ಗೆ ಏರ್ಪಡಿಸಿ ತರಬೇತಿಯನ್ನು ನೀಡಲಾಯಿತು. ದೇವಾಲಯಗಳ ನಿರ್ಮಾಣ, ಬಡವಿದ್ಯಾರ್ಥಿಗಳ ಶಿಕ್ಷಣ, ನಿರುದ್ಯೋಗಿ ಯುವಜನರ ತರಬೇತಿ, ವಿಧವೆಯರಿಗೆ ನೆರವು, ಬಡವರ ವಸತಿ ಸೌಕರ್ಯಕ್ಕಾಗಿ ಹೆಂಚುಗಳ ನೆರವು, ದೈವಕರೆಗೆ ಉತ್ತೇಜನ ನಿತ್ಯನಿರಂತರವಾಗಿ ಸಾಗಿದವು. ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಿ, ಧರ್ಮಾಧ್ಯಕ್ಷ ಅಲ್ಫೋನ್ಸ್ ಮಥಾಯಸ್‌ರವರು ಗೈದ ಸಾಧನೆಗಳು ಗಮನೀಯವಾದವು.

ಬಿಷಪ್ ಅಲ್ಫೋನ್ಸ್ ಮತಿಯಾಸ್‌ರು ತಮ್ಮ ಧರ್ಮಕ್ಷೇತ್ರ ಮಿಷನರಿ ಧರ್ಮಕ್ಷೇತ್ರವಾದ್ದರಿಂದ, ಇಲ್ಲಿನ ಧಾರ್ಮಿಕ ಕಾರ್ಯಕ್ರಮಗಳು ಜನಸಾಮಾನ್ಯರಿಗೂ ತಿಳಿಯುವಂತಿರಬೇಕು ಎಂಬ ನಿಯಮವನ್ನು ತಮ್ಮ ಅಂದಿನ 17 ಜನ ಗುರುಗಳನ್ನು ಕರೆದು ಅವರೊಡನೆ ಚರ್ಚಿಸಿ ಕನ್ನಡಭಾಷೆಯನ್ನು ಪ್ರಧಾನ ಭಾಷೆಯನ್ನಾಗಿ ಮಾಡಲು ಮುಂದಾದರು. ಅವರು 17.01.1967ರಂದು ಒಂದು ಸುತ್ತೋಲೆ ಹೊರಡಿಸಿ, ತಮ್ಮ ಧರ್ಮಕ್ಷೇತ್ರದಲ್ಲಿ ಕನ್ನಡವೇ ಅಧಿಕೃತ ಭಾಷೆಯಾಗಿರಬೇಕೆಂದು ಸಮಸ್ತರಿಗೂ ತಿಳಿಯಪಡಿಸಿ, ಭಾಷಾನೀತಿಯನ್ನು ರೂಪಿಸಿದರು. ಆ ಸಂದರ್ಭದಲ್ಲಿ ಅವರು ನುಡಿದ ಮಾತುಗಳು ಇಂದೂ ಪ್ರಸ್ತುತ : "ಒಮ್ಮೆ ತೀರ್ಮಾನ ಕೈಗೊಂಡ ಮೇಲೆ ಭಾಷಾನೀತಿಯನ್ನು ಪುನರ್ ಪರಿಶೀಲನೆ ಮಾಡುವ ಅಗತ್ಯವಿರಬಾರದು. ನಮ್ಮ ಸಮಸ್ತ ಶಕ್ತಿ, ಸಾಮರ್ಥ್ಯಗಳನ್ನು

ದೈವಾರಾಧನ ವಿಧಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ನಾವು ವಿನಿಯೋಗಿಸಬೇಕೇ ವಿನಃ ಆನಂತರ ಬರುವ ಅಭಿಪ್ರಾಯಗಳನ್ನು ಇತ್ಯರ್ಥ ಮಾಡುವು ದರಲ್ಲಿ ನಾವು ವಿಭಾಗವಾಗುವುದು ಬೇಡ." (ಫಾ. ಮಾರ್ಸೆಲ್ ಜೆ. ಪಿಂಟೊ, ಸ್ನೇಹಜ್ಯೋತಿ, ಮಾರ್ಚ್ 2006, ಪುಟ–9)

ಹೀಗೆ ಚಿಕ್ಕಮಗಳೂರು ಧರ್ಮಕ್ಷೇತ್ರದ ದೈವಾರಾಧನಾ ವಿಧಿಯ ಪ್ರಮುಖ ಮತ್ತು ಅಧಿಕೃತ ಭಾಷೆ ಕನ್ನಡ ಎಂದೂ ಈ ಗುರಿಯನ್ನು ಮುಟ್ಟಲು ಕೊಂಕಣಿ ಮತ್ತು ತಮಿಳುಭಾಷೆಗಳು ಸಹಾಯಕವಾಗಬೇಕೇ ವಿನಃ ತೊಡಕಾಗಬಾರದು ಎಂದು ತೀರ್ಮಾನಿಸಲಾಯಿತು. ಬಿಷಪರು ಹೊರಡಿಸಿದ ಸುತ್ತೋಲೆಯ ವಿವರ ಹೀಗಿದೆ:

VERNACULAR LANGUAGE : Taking into consideration the various factors, opinions and reasons for the same in the matter of the vernacular language, the following decision is taken to the implemented gradually, steadily and prudently : Principle Language : Kannada, Subsidiary Language : Konkani and Tamil, Official Language shall be the Principal language. i.e. Kannada. IMPLEMENTATION : all shall have the principle language in view so that slowly, gradually and steadily all arrive at that, Until such times, the subsidiary languages will be a help and not a hindrance.

Where the principle language is already in use, all the allowable parts of the mass (i.e. except the Canon and the silent prayers) may be in the vernacular provided the approved version in the principle language is available in a fitting form. In the case of subsidiary language, I rely on the discretion of the parish priests to phase the introduction of the principle language in consultation with the Bishop so that the transition becomes smooth and profitable to all. Everywhere more and more principle language shall be introduced gradually beginning with singing, reading and then the common prayers.

(ಬೇರೆಬೇರೆ ವಿಚಾರಗಳ ಬಗ್ಗೆ ಚರ್ಚಿಸಿ, ವಿನಮಯ ಮಾಡಿಕೊಂಡು ಕಾರ್ಯಕಾರಣಗಳನ್ನು ಮುಂದಿಟ್ಟುಕೊಂಡು ಚರ್ಚ್‌ನಲ್ಲಿ ಬಳಸಬೇಕಾದ ಭಾಷೆಯ ಬಗ್ಗೆ ಒಂದು ನಿರ್ಧಾರಕ್ಕೆ ಬರಲಾಗಿದೆ. ಪ್ರಧಾನ ಭಾಷೆ ಕನ್ನಡ, ಸಹಭಾಷೆ ಕೊಂಕಣಿ ಮತ್ತು ತಮಿಳು ಹಾಗೂ ಅಧಿಕೃತ ಭಾಷೆ ಪ್ರಧಾನ ಭಾಷೆ ಕನ್ನಡವೇ ಆಗಿರುತ್ತದೆ. ಎಲ್ಲರೂ ಪ್ರಧಾನಭಾಷೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಆದಷ್ಟು ಬೇಗ ಪೂಜಾವಿಧಿಗಳಲ್ಲಿ ಕ್ರಮವಾಗಿ ಕನ್ನಡವನ್ನು ಜಾರಿಗೆ ತರಬೇಕು. ಸಹ ಭಾಷೆಯ ಉಪಯೋಗವನ್ನು ಧರ್ಮಕೇಂದ್ರದ ಗುರುಗಳೇ ನಿರ್ಧರಿಸಬೇಕು. ಅಂಥ

ಸಂದರ್ಭದಲ್ಲಿ ಬಿಷಪರ ಗಮನಕ್ಕೆ ತಂದು ಪೂಜಾವಿಧಿಯ ಭಾಗಗಳು ಎಲ್ಲರಿಗೂ ಅರ್ಥವಾಗುವಂತೆ ಅನುವಾದಿಸಿಕೊಂಡು ಉಪಯೋಗಿಸಬೇಕು. ಪೂಜೆಯ ಹಾಡು, ವಾಚನ ಮತ್ತು ಸಾಮಾನ್ಯ ಪ್ರಾರ್ಥನೆಗಳು ಕನ್ನಡದಲ್ಲಿಯೇ ಇರಬೇಕು. ಸಹಭಾಷೆಗಳು ಕೇವಲ ಸಹಾಯಕವಾಗಿರಬೇಕೇ ಹೊರತು ಕಂಟಕವಾಗಬಾರದು).

ಇದು ಧರ್ಮಕ್ಷೇತ್ರದಲ್ಲಿ ಬಳಸಬೇಕಾದ ಭಾಷಾನೀತಿಯ ಬಗ್ಗೆ ಬಿಷಪ್ ಅ. ಮತಿಯಾಸರು ತೆಗೆದುಕೊಂಡ ಒಂದು ಚಾರಿತ್ರಿಕ ನಿರ್ಣಯ. ಇದನ್ನು ಅವರ ಕಾಲದಲ್ಲಿ ಕಡ್ಡಾಯವಾಗಿ ಅನುಷ್ಠಾನಕ್ಕೆ ತಂದರು. ಇಂದಿಗೂ ಅದನ್ನು ನಾವು ಪಾಲಿಸಿಕೊಂಡು ಹೋಗಬೇಕಾದ್ದು ನಮ್ಮ ಕರ್ತವ್ಯ ಎಂದು ಧರ್ಮಕ್ಷೇತ್ರ ಹಕ್ಕೊತ್ತಾಯಿಸುತ್ತದೆ. 18.10.1986ರಂದು ಬಿಷಪ್ ಅಲ್ಫೋನ್ಸ್ ಮತಿಯಾಸ್‌ರವರನ್ನು ಬೆಂಗಳೂರು ಮಹಾಧರ್ಮಕ್ಷೇತ್ರಕ್ಕೆ ಮಹಾಧರ್ಮಾಧ್ಯಕ್ಷರನ್ನಾಗಿ ವ್ಯಾಟಿಕನ್ ನೇಮಿಸಿತು. 1986 ನವೆಂಬರ್ ಕೊನೆಯವರೆಗೂ ಇವರು ಧರ್ಮಕ್ಷೇತ್ರದ ಆಡಳಿತವನ್ನೂ ನೋಡಿ ಕೊಂಡರು. ಅನಂತರ ಹೊಸ ಧರ್ಮಾಧ್ಯಕ್ಷರ ನೇಮಕ ಆಗುವವರೆಗೂ ಮೊನ್ಸಿಜ್ಞೊರ್ ಜೆ.ಪಿ.ದಾ.ಪಿ. ಸಿಕ್ವೇರಾರವರು ಧರ್ಮಕ್ಷೇತ್ರದ ಆಡಳಿತಾಧಿಕಾರಿಯಾಗಿದ್ದರು. ಸಂತ ಪೇತ್ರರ ಗುರು ವಿದ್ಯಾಲಯದ ರೆಕ್ಟರ್‌ರವರಾಗಿದ್ದ ಡಾ. ಜೆ.ಬಿ. ಸಿಕ್ವೇರಾರ ವರನ್ನು ಚಿಕ್ಕಮಗಳೂರು ಧರ್ಮಕ್ಷೇತ್ರದ ನೂತನ ಬಿಷಪರನ್ನಾಗಿ 26.01.1987ರಂದು ನೇಮಕ ಮಾಡಲಾಯಿತು. ಜೂನ್ 11, 1987ರಂದು ಇವರಿಗೆ ಧರ್ಮಾಧ್ಯಕ್ಷ ದೀಕ್ಷೆ ಪ್ರಾಪ್ತವಾಯಿತು.

**ಅತಿ. ವಂ. ಡಾ. ಜೆ.ಬಿ. ಸಿಕ್ವೇರಾ**



**ಬಿಷಪ್ ಜೆ.ಬಿ. ಸಿಕ್ವೇರಾ**

30.05.1989ರಂದು ಚಿಕ್ಕಮಗಳೂರು ಧರ್ಮಕ್ಷೇತ್ರದ ರಜತ ಮಹೋತ್ಸವವನ್ನು ಆಚರಿಸಲಾಯಿತು. ಆ ಸಂದರ್ಭದಲ್ಲಿ ಈ ಧರ್ಮಕ್ಷೇತ್ರದಲ್ಲಿ ದೇವರು ಮಾಡಿರುವ ಮಹಾತ್ಕಾರ್ಯಗಳಿಗಾಗಿ ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು. ಧರ್ಮಾಧ್ಯಕ್ಷ ಜೆ.ಬಿ.ಸಿಕ್ವೇರಾರವರು ತಮ್ಮ ಆಡಳಿತ ಸಾಮರ್ಥ್ಯ, ಬೌದ್ಧಿಕ, ಪ್ರೌಢಿಮೆಯಿಂದ ಪ್ರತಿಭೆಯಿಂದ ಹಾಗೂ ಆಳವಾದ ಆಧ್ಯಾತ್ಮಿಕ ಪ್ರತಿಭೆಯಿಂದ ಧರ್ಮಕ್ಷೇತ್ರವನ್ನು ಪ್ರಗತಿಯೆಡೆಗೆ ಕೊಂಡೊಯ್ದಿದ್ದಾರೆ. ಮರಿಯಾನಗರ, ಬೇಲೂರು, ರಂಗೇನಹಳ್ಳಿ, ಹೆಮ್ಮಕ್ಕಿ, ಜ್ಯೋತಿನಗರ, ಮಾಗುಂಡಿ, ವಿಜಯಪುರ, ಸಕಲೇಶಪುರ ಹಾಗೂ ಗಾಡೇನಹಳ್ಳಿಯಲ್ಲಿ ಹೊಸ ದೇವಾಲಯಗಳನ್ನು ನಿರ್ಮಿಸಲಾಗಿದೆ. ಕೂವೆ, ಅಲ್ಫೋನ್ಸ್‌ನಗರ, ಬಸ್ಕಲ್, ಸುಂಡೇಕೆರೆ, ತರೀಕೆರೆ, ಮರಿಯಾನಗರ, ಕಳಸ, ಜೋಸೆಫ್‌ನಗರ ಇತ್ಯಾದಿ ಕಡೆಗಳಲ್ಲಿ ಗುರುನಿಲಯಗಳನ್ನು ನಿರ್ಮಿಸಲಾಗಿದೆ. ಹಾಸನಕ್ಕೆ ಕ್ಲಾಯಿಸ್ಟರ್ಡ್ ಹಾಗೂ ಹೋಲಿಕ್ರಾಸ್ ಕನ್ಯಾ ಸಹೋದರಿಯರು ಆಗಮಿಸಿದ್ದಾರೆ. ತೆರೇಸಾಪುರ, ದಾಸಾಪುರ ಹಾಗೂ ಜೋಸೆಫ್ ನಗರಗಳಲ್ಲಿ ಹೊಸ ಕನ್ಯಾಸಹೋದರಿ ಮಠಗಳು ಆರಂಭವಾಗಿವೆ. ಜ್ಯೋತಿನಗರದಲ್ಲಿ ಬ್ರಿಜಿಟಾಯ್ನ್ ಕನ್ಯಾಸಹೋದರಿಯರು

ಮಠವನ್ನು ಸ್ಥಾಪಿಸಿರುತ್ತಾರೆ. ಹಾಸನದಲ್ಲಿ ಸಲೇಶಿಯನ್ ಗುರುಗಳು ತಾಂತ್ರಿಕ ಶಾಲೆಯನ್ನು ತೆರೆದಿದ್ದಾರೆ. ಕಣತಿಯಲ್ಲಿ ಮೌಂಟ್ ಪೋರ್ಟ್ ಸಭೆಯವರು ತರಬೇತಿ ಕೇಂದ್ರವನ್ನು ಆರಂಭಿಸಿದ್ದಾರೆ. ಧರ್ಮಾಧ್ಯಕ್ಷರ ನಿವಾಸದ ಬಳಿ ಕಿರಿಯ ಗುರು ವಿದ್ಯಾಲಯಕ್ಕಾಗಿ ವಿಶಾಲವಾದ ಕಟ್ಟಡವನ್ನು ನಿರ್ಮಿಸಲಾಗಿದೆ. ಹೀಗೆ ಧರ್ಮಾಧ್ಯಕ್ಷ ಜೆ.ಬಿ.ಸಿಕ್ವೇರಾರವರ ನೇತೃತ್ವದಲ್ಲಿ ಧರ್ಮಕ್ಷೇತ್ರವು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುತ್ತಾ ಮುನ್ನಡೆಯಿತು.

ಬಿಷಪ್ ಜೆ.ಬಿ. ಸಿಕ್ವೇರಾ ಅವರ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆಯನ್ನು ಚಿಕ್ಕಮಗಳೂರು ಧರ್ಮಕ್ಷೇತ್ರದ ಕಕ್ಷೆಯಿಂದ ಬೇರ್ಪಡಿಸಲಾಯಿತು. ಚಿತ್ರದುರ್ಗ ಜಿಲ್ಲೆಯನ್ನು ಶಿವಮೊಗ್ಗ ಜಿಲ್ಲೆಯ ಜೊತೆ ಸೇರಿಸಿ, ಶಿವಮೊಗ್ಗ ಧರ್ಮಕ್ಷೇತ್ರವನ್ನು ನಿರ್ಮಿಸಲಾಯಿತು (03.12.1988). ಅತಿ.ವಂ.ಡಾ. ಇಗ್ನೇಷಿಯಸ್ ಪಿಂಟೊ ಅವರು ಮೊದಲ ಬಿಷಪರಾದರು.

**ಅತಿ. ವಂ. ಡಾ. ತೋಮಸಪ್ಪ ಅಂತೋಣಿಸ್ವಾಮಿ**


**ಬಿಷಪ್ ಅಂತೋಣಿಸ್ವಾಮಿ**

ಬೆಂಗಳೂರು ಸಂತ ಪೇತ್ರರ ಗುರುಮಠ (Seminary) ದಲ್ಲಿ ಮಿಸ್ಸಿಯಾಲಜಿ ಎಂಬ ವಿಷಯವನ್ನು ಬೋಧಿಸುತ್ತಿದ್ದ ಫಾದರ್, ಅಂತೋಣಿಸ್ವಾಮಿಯವರನ್ನು ಪೋಪ್ 16ನೇ ಬೆನೆಡಿಕ್ಟ್ ಅವರು ಡಿಸೆಂಬರ್ 2, 2006ರಂದು ಚಿಕ್ಕಮಗಳೂರಿನ ಮೂರನೆಯ ಬಿಷಪರನ್ನಾಗಿ ನೇಮಿಸಿರುವುದಾಗಿ ಪ್ರಕಟಿಸಿದರು. ಅವರ ನೇಮಕಾತಿ ಪತ್ರ :

ದೇವರ ಸೇವಕರ ಸೇವಕ, ಧರ್ಮಾಧ್ಯಕ್ಷ ಬೆನೆಡಿಕ್ಟ್ ಆದ ನಾವು ಚಿಕ್ಕಮಗಳೂರಿನ ಧರ್ಮಾಧ್ಯಕ್ಷರಾಗಿ ಆಯ್ಕೆಯಾದ ಬೆಂಗಳೂರು ಮಹಾಧರ್ಮಕ್ಷೇತ್ರದ ಯಾಜಕವರ್ಗಕ್ಕೆ ಸೇರಿದ ನಮ್ಮ ಪ್ರೀತಿಯ ಪುತ್ರ **ಅಂತೋಣಿ ಸ್ವಾಮಿ ತೋಮಸಪ್ಪ** ಆದ ನಿಮಗೆ ಆಯುರಾರೋಗ್ಯವನ್ನು ಹಾರೈಸುತ್ತಿದ್ದೇವೆ ಮತ್ತು ಪ್ರೇಷಿತಾಶೀರ್ವಾದಗಳನ್ನು ನೀಡುತ್ತಿದ್ದೇವೆ.

ಪುನೀತ ಪೇತ್ರರ ಆಧ್ಯಾತ್ಮಕ ಆಸನದಲ್ಲಿ ಕುಳ್ಳಿರಿಸಲ್ಪಟ್ಟ ನಾವು ಕರ್ತರ ಇಡೀ ಮಂದೆಯ ಸುಕ್ಷೇಮ ವನ್ನು ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ನಮ್ಮೊಲುಮೆಯ ಸಹೋದರ ಜಾನ್ ಬ್ಯಾಪಿಸ್ಟ್ ಸಿಕ್ವೇರಾರವರು ರಾಜೀನಾಮೆ ನೀಡಿದ್ದರಿಂದ ತೆರವಾದ ಚಿಕ್ಕಮಗಳೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರ ಸ್ಥಾನವನ್ನು ತುಂಬಬೇಕಾದ ಪ್ರಮೇಯ ಬಂದೊದಗಿದೆ. ಆ ಧರ್ಮಕ್ಷೇತ್ರದ ಮೇಷಪಾಲಕರನ್ನಾಗಿ ನಿಮ್ಮನ್ನು ಸ್ಥಾಪಿಸಲು ನೀವು ಅರ್ಹರೆಂದು ಕಂಡುಬಂದಿರುತ್ತೀರಿ. ಸಾಬೀತಾದ ವರದಾನಗಳಿಂದ ತುಂಬಿದವರಾಗಿರುವ ನೀವು ಧರ್ಮಸಭೆಯ ವಿಚಾರಗಳಲ್ಲಿ ಪಾಂಡಿತ್ಯವನ್ನು ಪ್ರದರ್ಶಿಸಿದ್ದೀರಿ.

ಆದ್ದರಿಂದ ಜಾಗತಿಕ ಸುವಾರ್ತಾ ಪ್ರಸಾರ ಸಭೆಯ ಅಭಿಪ್ರಾಯವನ್ನು ಸಂಗ್ರಹಿಸಿದ ನಾವು ನಮಗಿರುವ ಪ್ರೇಷಿತ ಪರಮಾಧಿಕಾರವನ್ನು ಬಳಸಿ ನಿಮ್ಮನ್ನು ಚಿಕ್ಕಮಗಳೂರಿನ ಧರ್ಮಾಧ್ಯಕ್ಷರನ್ನಾಗಿ ಸಕಲ ಹಕ್ಕು ಮತ್ತು ಕರ್ತವ್ಯಗಳೊಡನೆ ನಾಮ ನಿರ್ದೇಶನ ಮಾಡಿರುತ್ತೇವೆ. ರೋಮ್ ನಗರದ ಹೊರಗಿರುವ ಯಾವುದೇ ಕಥೋಲಿಕ ಧರ್ಮಾಧ್ಯಕ್ಷ ರಿಂದ ಅಧಿಕೃತ ಆರಾಧನಾ ವಿಧಿಯ ಕಾನೂನುಗಳನ್ವಯ ದೀಕ್ಷೆ ಸ್ವೀಕರಿಸಲು ಅನುಮತಿ ಯಿತ್ತಿರುತ್ತೇವೆ. ಆದರೆ ಅದಕ್ಕೆ ಮುನ್ನ ನೀವು ಕಥೋಲಿಕ ವಿಶ್ವಾಸದ ನಿವೇದನೆಯನ್ನು ಮಾಡಬೇಕು ಮತ್ತು ಧರ್ಮಸಭೆಯ ಕಾನೂನಿಗನುಸಾರವಾಗಿ ನಮಗೂ ಮತ್ತು ನಮ್ಮ ಉತ್ತರಾಧಿಕಾರಿಗಳಿಗೂ ಬದ್ಧರಾಗಿರುತ್ತೀರೆಂದು ಪ್ರಮಾಣ ಮಾಡತಕ್ಕದ್ದು. ಈ ಪತ್ರದ ಒಕ್ಕಣೆಯನ್ನು ಅದೇ ಧರ್ಮಕ್ಷೇತ್ರಕ್ಕೆ ಸೇರಿದ ಯಾಜಕವರ್ಗ ಮತ್ತು ಜನತೆಯ ಗಮನಕ್ಕೆ ತರಬೇಕೆಂದು ನಾವು ಆದೇಶಿಸುತ್ತಿದ್ದೇವೆ. ನಿಮ್ಮನ್ನು ಸಂತೋಷದಿಂದ ಸ್ವೀಕರಿಸಬೇಕೆಂದು ಮತ್ತು ಸ್ವಇಚ್ಛೆಯಿಂದ ನಿಮ್ಮನ್ನು ಹಿಂಬಾಲಿಸ ಬೇಕೆಂದು ಅವರನ್ನು ಕೇಳಿಕೊಳ್ಳುತ್ತೇವೆ.



*ಜ್ಯೋತಿನಗರದಲ್ಲಿರುವ ಧರ್ಮಾಧ್ಯಕ್ಷರ ಕಛೇರಿ ಹಾಗೂ ನಿವಾಸ*

ಕಡೆಯದಾಗಿ ಗೌರವಾನ್ವಿತ ಸಹೋದರ, ನಿಮ್ಮ ಮೇಲೆ ವರಗಳನ್ನು ಸುರಿಸ ಬೇಕೆಂದು ಪಾವನಾತ್ಮರನ್ನು ಬೇಡುತ್ತೇನೆ. ಈ ವರದಾನಗಳಿಂದ ಸಹಾಯ ಪಡೆದು, ಮಾತುಗಳ ಮೂಲಕ ಹಾಗೂ ಎಲ್ಲಕ್ಕಿಂತ ಹೆಚ್ಚು ಶಕ್ತಿಯುತವಾದ ನಿಮ್ಮ ಆದರ್ಶದಿಂದ ನಿಮ್ಮ ಪಾಲನೆಗೆ ವಹಿಸಲ್ಪಟ್ಟ ಭಕ್ತ ವಿಶ್ವಾಸಿಗಳನ್ನು ಉತ್ತೇಜಿಸಿರಿ. ಹೀಗೆ ಅವರು ಪರಮ ಪ್ರಸಾದ ಮತ್ತು ದೈವವಾಕ್ಯಗಳ ಮೇಲೆ ಕಟ್ಟಲ್ಪಟ್ಟ ಪಾವನತೆಯ ಜೀವನದೆಡೆಗೆ ಸಾಗುವರು. ಏಕೆಂದರೆ ದೇವರ ವಾಕ್ಯವು ಬರಿದಾದುದಲ್ಲ. ವ್ಯರ್ಥವಾದುದೂ ಅಲ್ಲ. ಬದಲಾಗಿ ಅದು ಜೀವಂತವಾಗಿದೆ ಹಾಗೂ ಶಕ್ತಿಯುತವಾಗಿದೆ. ಏಕೆಂದರೆ ತಾನು ಹೇಳುವುದನ್ನು ಅದು ಸಾಧಿಸುತ್ತದೆ ಮಾತ್ರವಲ್ಲ, ದೇವರ ಶಕ್ತಿಯನ್ನು ಸ್ವತಃ ಒಳಗೊಂಡಿದೆ. ಕನ್ಯಾ

ಮರಿಯಮ್ಮನವರ ಪಾಲನೆಯಲ್ಲಿ ನಿಮ್ಮೊಂದಿಗೆ ಹಾಗೂ ನಮಗೆ ಅತಿ ಪ್ರಿಯವಾಗಿರುವ ಚಿಕ್ಕಮಗಳೂರಿನ ಧರ್ಮಸಮುದಾಯದೊಂದಿಗೆ ದೈವಾನುಗ್ರಹ ಸದಾ ಇರಲಿ.

ನಮ್ಮ ಪೇತ್ರಾಧಿಕಾರದ ದ್ವಿತೀಯ ವರ್ಷವೂ ಕರ್ತರ ವರ್ಷವೂ ಆದ 2006ನೇ ಇಸವಿಯ ಡಿಸೆಂಬರ್ ತಿಂಗಳ 2ನೇ ದಿನದಂದು ರೋಮ್‌ನಗರದ ಸಂತ ಪೇತ್ರರ ಮಹಾಮಂದಿರದಲ್ಲಿ ಈ ಪತ್ರವನ್ನು ನೀಡಿರುತ್ತೇವೆ. ಫೆಬ್ರವರಿ 6, 2007ರಂದು ಚಿಕ್ಕಮಗಳೂರು ಧರ್ಮಾಧ್ಯಕ್ಷರಾಗಿ ದೀಕ್ಷಾಭಿಷೇಕ ಪಡೆದ ಅತಿ ವಂದಿತ ಡಾ. ತೋಮಸಪ್ಪ ಅಂತೋಣಿ ಸ್ವಾಮಿಯವರು ತಮ್ಮ ಅಧಿಕೃತ ನಿವಾಸವಾದ 'ಜ್ಯೋತಿನಿಲಯ'ದ ಬಾಗಿಲನ್ನು ಸರ್ವರಿಗೂ ಸದಾ ತೆರೆದಿಟ್ಟರು.

ಉತ್ತಮ ಮೇಷಪಾಲಕರಾಗಿ, ಧರ್ಮಕ್ಷೇತ್ರವನ್ನು ಕ್ಷಿಪ್ರಗತಿಯಲ್ಲಿ ಮುನ್ನಡೆಸಲು ಮುಂದಾದರು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಧರ್ಮಕ್ಷೇತ್ರವನ್ನು ಮುನ್ನಡೆಸುತ್ತಿದ್ದಾರೆ. ಪಾಲನಾಬದ್ಧತೆಯಿಂದ ಧರ್ಮಕ್ಷೇತ್ರದ ಬೇರೆ ಬೇರೆ ಧರ್ಮಕೇಂದ್ರಗಳಿಗೆ ಭೇಟಿಯಿತ್ತು, ರೋಗಿಗಳನ್ನು ವಿಶೇಷವಾಗಿ ಸಂಧಿಸಿ, ಪ್ರಾರ್ಥಿಸಿ ಅವರಿಗೆ ಸಮಾಧಾನ ಸಾಂತ್ವನ ಹೇಳುವ ಉದಾರ ಹೃದಯವಂತಿಕೆಯನ್ನು ಮೆರೆದಿದ್ದಾರೆ. ಧರ್ಮಕೇಂದ್ರಗಳ ಜನರ ಕುಂದುಕೊರತೆಗಳನ್ನು ಆಲಿಸಿ ಸಕಾರಾತ್ಮಕವಾಗಿ ಸ್ಪಂದಿಸಿ ಮುನ್ನಡೆಸುತ್ತಿರುವುದು ಅವರ ಅಪಾರ ಕಾಳಜಿಗೆ ಸಾಕ್ಷಿಯಾಗಿದೆ. ತಮ್ಮ ಆಗಮನದ ಅಲ್ಪ ಸಮಯದಲ್ಲೇ ಹಲವು ದೇವಾಲಯಗಳ ನವೀಕರಣ, ನೂತನ ಗುರುನಿವಾಸದ ಕಟ್ಟಡಗಳು ಮತ್ತು ನಾಲ್ಕು ಧರ್ಮಕೇಂದ್ರಗಳ ಸ್ಥಾಪನೆಯಾಗಿದೆ. ಜೀವನಕ್ಕೆ ಚೇತನ, ಸ್ಫೂರ್ತಿ ತುಂಬಲು ಧರ್ಮಕ್ಷೇತ್ರದಲ್ಲಿ ಹಲವಾರು ನಿಯೋಗ ಆಯೋಗಗಳಿಗೆ ಚಾಲನೆಯನ್ನು ನೀಡುತ್ತಾ ನಿರ್ದೇಶಕರು ಮತ್ತು ಸಹ ನಿರ್ದೇಶಕರುರನ್ನು ನೇಮಿಸಿ ಧರ್ಮಸಭೆಯ ಮತ್ತು ಧರ್ಮಕ್ಷೇತ್ರದ ಪಾಲನಾ ನವೀಕರಣಕ್ಕೆ ನಾಂದಿ ಹಾಡಿದ್ದಾರೆ. ಇದು ಅವರ ನಿರಂತರ ಉತ್ಸಾಹ, ಕಾಳಜಿಯನ್ನು ಸಾಕ್ಷಾತ್ಕರಿಸುತ್ತದೆ. ಅಧ್ಯಾತ್ಮಿಕವಾಗಿಯೂ ವಿಶ್ವಾಸಿಗಳಿಗೆ ಉಪಯೋಗವಾಗುವಂತೆ ಉಪಧರ್ಮ ಕೇಂದ್ರಗಳ ಸ್ಥಾಪನೆ ಮಾಡಿದ್ದಾರೆ. ಉಪಧರ್ಮ ಕೇಂದ್ರಗಳನ್ನು ಧರ್ಮಕೇಂದ್ರಗಳ ಸ್ಥಾನಕ್ಕೆ ಏರಿಸಿ ಕ್ರೈಸ್ತ ವಿಶ್ವಾಸಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಅವರ ಕ್ರಿಯಾಶೀಲತೆಯನ್ನು ಪ್ರತಿಬಿಂಬಿಸುತ್ತದೆ.




ಶಿಕ್ಷಣ ಮತ್ತು ಆರೋಗ್ಯ ಅತೀ ಮುಖ್ಯವಾದ ಕ್ಷೇತ್ರಗಳಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಗಮನವನ್ನು ಹರಿಸಿ, ವಿಶೇಷವಾಗಿ ಕಥೋಲಿಕ ಮಕ್ಕಳು ಮೂಲ

ಭೂತ ಶಿಕ್ಷಣದಿಂದ ವಂಚಿತರಾಗದಂತೆ ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಉಂಟು ಮಾಡಿದ್ದಾರೆ. ಮುಖ್ಯವಾಗಿ ಅರೇಹಳ್ಳಿ, ದಾಸಾಪುರ, ಮರಿಯಾನಗರ, ಶೆಟ್ಟಿಹಳ್ಳಿ ಧರ್ಮಕೇಂದ್ರಗಳಲ್ಲಿ ಪ್ರೌಢಶಾಲೆಗಳನ್ನು ಆರಂಭಿಸಲು ಚಾಲನೆ ನೀಡಿದ್ದಾರೆ. ಬಡವಿದ್ಯಾರ್ಥಿಗಳಿಗೆ ಸಮಾಜ ಸೇವಾಸಂಸ್ಥೆಯ ಹಾಗೂ ಧರ್ಮಕ್ಷೇತ್ರದ ಮೂಲಕ ಸಹಾಯ ಹಸ್ತವನ್ನು ಚಾಚಿ ಹಲವಾರು ಮಕ್ಕಳ ಬಾಳಿಗೆ ಬೆಳಕಾಗಿ, ವಿದ್ಯಾಶಿಲ್ಪಿಯಾಗಿ ಸೇವಾನಿರತರಾಗಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಂತೂ ಅನೇಕ ಬದಲಾವಣೆಗಳನ್ನು ತರಲು ತೊಡಗಿದ್ದಾರೆ. ಸಂಸ್ಥೆಯ ಎಲ್ಲಾ ಜನಪರ ಕೆಲಸ ಕಾರ್ಯಚಟುವಟಿಕೆಗಳಿಗೆ ಮನ್ನಣೆಯಿತ್ತು, ಪ್ರೋತ್ಸಾಹಿಸುತ್ತಾ ಇದ್ದಾರೆ. ಜನರ ಕಷ್ಟಗಳಿಗೆ, ಕಾರ್ಪಣ್ಯಗಳಿಗೆ ಸ್ಪಂದಿಸಿ ವಿವಿಧ ಅಭಿವೃದ್ಧಿ ಕಾರ್ಯಗಳ ಮುಖೇನ ಸಹಾನುಭೂತಿಯಿಂದ ಸಹಾಯ ಹಸ್ತ ಚಾಚಿದ್ದಾರೆ.

ತಮ್ಮ ಸರಳ ಸಜ್ಜನಿಕೆಯಿಂದ ಧರ್ಮಕ್ಷೇತ್ರದ ಗುರುಗಳೊಂದಿಗೆ ಮತ್ತು ವಿಶ್ವಾಸಿಗಳೊಂದಿಗೆ ಬೆರೆತು ಅವರ ಸುಖದುಃಖಗಳಲ್ಲಿ ಭಾಗಿಯಾಗಿ, ಧೈರ್ಯ ಸ್ಥೈರ್ಯ ತುಂಬುತ್ತ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶಿಸ್ತು, ಸಂಯಮ, ದೈವ ಭಕ್ತಿ, ಪ್ರಾರ್ಥನಾ ಭರಿತ ದಿನಚರಿ, ಮುಗ್ಧ ನಗು, ಪ್ರೀತಿ ಪೂರಿತ ಹಿತಮಿತ ಮಾತು, ಸಹಾಯವನ್ನರಿಸಿ ಬಂದವರಿಗೆ ಸ್ಪಂದಿಸುವ ಹೃದಯವಂತಿಕೆ, ಚಿಂತನಶೀಲ ಮನಸ್ಸು, ಕಾರ್ಯಶೀಲ ಬದುಕು, ಸಾಧನೆಯತ್ತ ತೀವ್ರ ಗಮನ, ವಿನೀತಾ ಭಾವದ ನಡೆನುಡಿಯಿಂದ ಕೇವಲ ಅತ್ಯಲ್ಪ ಕಾಲದಲ್ಲಿ ಬಿಷಪ್ ಅಂತೋಣಿಸ್ವಾಮಿಯವರು ಜನಮನವನ್ನು ಗೆದ್ದಿದ್ದಾರೆ. ಬಿಷಪ್ ಅಂತೋಣಿ ಸ್ವಾಮಿಯವರ ಯಾಜಕ ದೀಕ್ಷೆಯ ರಜತ ಮಹೋತ್ಸವವನ್ನು ಚಿಕ್ಕಮಗಳೂರಿನ ಯಾಜಕ ಬಳಗ, ಸನ್ಯಾಸಿ-ಸನ್ಯಾಸಿನಿಯರು ಮತ್ತು ದೈವ ಪ್ರಜೆಗಳು ಅವರಿಗೆ ಅಭಿನಂದನಾ ಪತ್ರವನ್ನು ಅರ್ಪಿಸಿ, ಅದ್ದೂರಿಯ ಸಮಾರಂಭವನ್ನು ಮಾಡಿರುವುದು ಅವರ ಜನಪ್ರಿಯತೆಗೆ ಹಿರಿಯ ಸಾಕ್ಷಿಯಾಗಿದೆ.

### ಧರ್ಮಕ್ಷೇತ್ರದ ವಲಯಗಳು

ಚಿಕ್ಕಮಗಳೂರು ಧರ್ಮಕ್ಷೇತ್ರವನ್ನು ಆಡಳಿತಾನುಕೂಲದ ದೃಷ್ಟಿಯಿಂದ ಮೂರು ವಲಯ (Deanery) ಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಅವು ಕ್ರಮವಾಗಿ ಅ) ಚಿಕ್ಕಮಗಳೂರು ವಲಯ, ಆ) ಹಾಸನ ವಲಯ ಮತ್ತು ಇ) ಬಾಳೆಹೊನ್ನೂರು ವಲಯ. ಈ ವಲಯಗಳಿಗೆ ಒಬ್ಬೊಬ್ಬರು ವಲಯಾಧಿಕಾರಿ (Dean) ಗಳಿದ್ದಾರೆ. ಅವರು ಆ ವಲಯದ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಾರೆ. ಪ್ರತಿಯೊಂದು ವಲಯಕ್ಕೂ ಕೆಲವು ಧರ್ಮಕೇಂದ್ರಗಳನ್ನು ನಿಯೋಜಿಸಲಾಗಿದೆ..

### ಅ. ಚಿಕ್ಕಮಗಳೂರು ವಲಯಕ್ಕೆ ಸೇರಿದ ಧರ್ಮಕೇಂದ್ರಗಳು

| | |
|---|---|
| 1. ಸಂತ ಜೋಸೆಫರ ಪ್ರಧಾನಾಲಯ (Cathedral) | ಚಿಕ್ಕಮಗಳೂರು |
| 2. ಬಾಲಯೇಸು ಪುಣ್ಯಕ್ಷೇತ್ರ (Bala Yesu Shrine) | ಚಿಕ್ಕಮಗಳೂರು |
| 3. ಸಂತ ಜೋಸೆಫರ ದೇವಾಲಯ (St. Joseph's Church) | ಬಸ್ಕಲ್ |
| 4. ಸಂತ ಪೇತ್ರರ ದೇವಾಲಯ (St. Peter's Church) | ಗೋಣಿಬೀಡು |

5. ನಿರಂತರಸಹಾಯಮಾತೆದೇವಾಲಯ (Perpetual Help Church) ಕಡೂರು
6. ಸಂತಫ್ರಾನ್ಸಿಸ್‌ಅಸಿಸ್ಸಿದೇವಾಲಯ (St. Francis of Assisi Church) ಕಲ್ಲತ್ತಿಪುರ
7. ಲೂರ್ದುಮಾತೆ ದೇವಾಲಯ (Our Lady of Lourdes Church) ಕೂದುವಳ್ಳಿ
8. ಸಂತ ಸ್ನಾನಿಕ ಯೊವಾನ್ನರ ದೇವಾಲಯ (St. John the Baptist) ಲಕ್ಕವಳ್ಳಿ
9. ಸಂತ ಲಾರೆನ್ಸರ ದೇವಾಲಯ (St. Lawrence Church) ಮಲ್ಲಂದೂರು
10. ಸಂತ ಅಂತೋಣಿ ದೇವಾಲಯ (St. Antony's Church) ಮೂಡಿಗೆರೆ
11. ಸಂತ ರಾಕಿಯವರ ದೇವಾಲಯ (St. Roque's Church) ಸಂತವೇರಿ
12. ಸಂತ ತೋಮಸರ ದೇವಾಲಯ (St. Thomas Church) ತರೀಕೆರೆ
13. ಪವಿತ್ರ ಕುಟುಂಬ ದೇವಾಲಯ (Holy Family Church) ವಿಜಯಪುರ

**ವಲಯಾಧಿಕಾರಿ : ಫಾ. ಟಿ.ಜೆ. ಸಿರಿಯಿಕ್ (Fr. T.J. Cyriae)**

**ಆ. ಹಾಸನ ವಲಯಕ್ಕೆ ಸೇರಿದ ಧರ್ಮಕೇಂದ್ರಗಳು**

1. ಸಂತ ಅಲ್ಫೋನ್ಸರ ದೇವಾಲಯ (St. Alphonsus Church) ಅಲ್ಫೊನ್ಸ್‌ನಗರ
2. ಸುವಾರ್ತಿಕಸಂತಯೊವಾನ್ನರದೇವಾಲಯ (St. John the Evangelist) ಅರೇಹಳ್ಳಿ
3. ಸಂತ ಮೇರಿ ದೇವಾಲಯ (St. Mary's Church) ಅರಸೀಕೆರೆ
4. ಸಂತ ಮೈಕಲ್‌ರ ದೇವಾಲಯ (St. Michael's Church) ಬೇಲೂರು
5. ಸ್ವರ್ಗಾರೋಹಣ ಮಾತೆ ದೇವಾಲಯ (Assumption) ದಾಸಾಪುರ
6. ಫಾತಿಮಾ ಮಾತೆಯ ದೇವಾಲಯ (Our Lady of Fathima) ಫಾತಿಮಾಪುರ
7. ಸಂತ ಇಗ್ನೇಷಿಯಸ್ ದೇವಾಲಯ (St. Ignatiu's Church) ಗಾಡೇನಹಳ್ಳಿ
8. ಸಂತ ಅಂತೋಣಿ ದೇವಾಲಯ (St. Antony's Church) ಹಾಸನ
9. ಮಾತೆ ಮರಿಯಮ್ಮನ ದೇವಾಲಯ (Mother Mary Church) ಹೊಳೆನರಸೀಪುರ
10. ಸಂತ ಜೋಸೆಫರ ದೇವಾಲಯ (St. Joseph's Church) ಜೋಸೆಫ್‌ನಗರ
11. ಸಂತ ಫ್ರಾ.ಝೇವಿಯರ್ ದೇವಾಲಯ(St. Francis Xavier) ಮಗ್ಗೆ
12. ಸಂತ ಮರಿಯಮ್ಮನ ದೇವಾಲಯ (St. Mary'sChurch) ಮರಿಯಾನಗರ
13. ಬಾಲಯೇಸು ದೇವಾಲಯ (Infant Jesus Church) ಮಠಸಾಗರ
14. ದಯಾಳು ಮಾತೆ ದೇವಾಲಯ (Our Lady of Mercy) ಸಕಲೇಶಪುರ
15. ಪವಿತ್ರ ಜಪಮಾಲೆ ದೇವಾಲಯ (Holy Rosary Church) ಶೆಟ್ಟಿಹಳ್ಳಿ
16. ಪವಿತ್ರ ಕುಟುಂಬದ ದೇವಾಲಯ (Holy Family Church) ಸುಂಡೇಕೆರೆ

**ವಲಯಾಧಿಕಾರಿ : ಫಾ. ಜಾರ್ಜ್ ಅಂದ್ರಾದೆ (Fr. George Andrade)**

**ಇ. ಬಾಳೆಹೊನ್ನೂರು ವಲಯದ ಧರ್ಮಕೇಂದ್ರಗಳು**

1. ವಿಜಯಮಾತೆ ದೇವಾಲಯ (Our Lady of Victory's) ಬಾಳೆಹೊನ್ನೂರು
2. ಬಾಲಿಕಾ ಮರಿಯಾ ದೇವಾಲಯ (Nativity of our Lady) ಬಣಕಲ್
3. ಪವಿತ್ರ ಹೃದಯ ದೇವಾಲಯ (Sacred Heart Church) ಬಸ್ರೀಕಟ್ಟೆ

4. ಪವಿತ್ರ ಶಿಲುಬೆ ದೇವಾಲಯ (Holy Cross Church) ಕೂವೆ
5. ಸಂತ ಜೋಸೆಫರ ದೇವಾಲಯ (St. Joseph's Church) ಹಿರೇಬೈಲು
6. ಸಂತ ರೀತಾಮ್ಮನ ದೇವಾಲಯ (St. Rita's Church) ಜಯಪುರ
7. ಸಂತ ಪೌಲರ ದೇವಾಲಯ (St. Paul's Church) ಕಡಬಗೆರೆ
8. ಜಗದೀಶ್ವರ ದೇವಾಲಯ (Jagadeeshwara Church) ಕಳಸ
9. ನಿತ್ಯಾಧಾರ ಮಾತೆಯ ದೇವಾಲಯ (Perpetual Succour Church) ಕೊಪ್ಪ
10. ಲೂರ್ದುಮಾತೆಯ ದೇವಾಲಯ (Our Lody of Lourdrs) ಮಾಗುಂಡಿ
11. ಸಂತ ಅಂತೋಣಿ ದೇವಾಲಯ (St. Antony's) ನರಸಿಂಹರಾಜಪುರ

**ವಲಯಾಧಿಕಾರಿ : ಫಾ. ಚಾರ್ಲ್ಸ್ ಪಿರೇರಾ (Fr. Charles Pereira)**

ಆಯಾ ವಲಯದ ಧರ್ಮಕೇಂದ್ರಗಳು ವಿಭಾಗ (Ward) ಗಳನ್ನಾಗಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತವೆ.

✣ ✣ ✣

***ಹಾರೆಯ ತರಿಸೀರಿ ಬಾರೆಯ ಅಗೆಸೀರಿ***
***ಬಾರೆ ಮೇಲೆ ಕಹಳೆ ನುಡಿಸೀರಿ – ಗಾಡೇನಹಳ್ಳಿ***
***ದಿಬ್ಬದ ಮೇಲೆ ತೇರ ಹರಿಸೀರಿ***